# ಆ. ಇಡೀ ಊರೇ ಒಂದಾಗಿ
# ಮಳೆನೀರು ಹಿಡಿದಿದೆ ನೋಡಿ!

### ಭಾವಣಿ ಮಳೆನೀರು ಸಂಗ್ರಹಕ್ಕೆ ಮಾದರಿಯಾಗಿರುವ ಕರ್ನಾಟಕದ ಅಪರೂಪದ ಒಂದು ಪುಟ್ಟಹಳ್ಳಿ ಗೆಂಡತ್ತೂರಿನ ಯಶೋಗಾಥೆ

ಹೆಗ್ಗಡದೇವನ ಕೋಟೆ ಮೈಸೂರಿನ ಈ ಭಾಗದ ಅದೃಷ್ಟದ ನೆಲ. ಅದು ಸಮೀಪದ ಮೈಸೂರು, ಬೆಂಗಳೂರು ನಗರವನ್ನು, ಪಕ್ಕದ ಕೇರಳವನ್ನು ಅಷ್ಟೇ ಅಲ್ಲ ಬಹುದೂರದ ಪ್ರವಾಸಿಗರನ್ನು ತನ್ನ ಹಸುರಿನ ಬನಸಿರಿಯಿಂದಲೇ ಆಕರ್ಷಿಸುತ್ತದೆ. ಅಷ್ಟೇ ಅಲ್ಲ ನಿಸರ್ಗ ಪ್ರಿಯರನ್ನು ತನ್ನೆಡೆಗೆ ಬರಲು ಪ್ರೇರಣೆ ನೀಡುತ್ತಲೇ ಇರುತ್ತದೆ. **"ನಾವಾಡುವ ನುಡಿಯೇ ಕನ್ನಡ ನುಡಿ, ನಾವಿರುವ ತಾಣವೇ ಗಂಧದ ಗುಡಿ"** ಎಂಬ ಪ್ರಿಯವಾದ ಹಾಡು ಈ ನಿಸರ್ಗದ ಗರ್ಭದೊಳಗಿಂದ ತೂರಿಬಂದಂತೆ ಕೇಳುತ್ತದೆ. ಮೈಸೂರು ದಸರಾ ಆನೆಗಳ ಪಳಗಿಸುವವರ 'ಖೆಡ್ಡಾ' ನೆನೆದು ಕೋಟೆ ಎಲ್ಲಾ ಭಾವನೆಗಳನ್ನು ಪಳಗಿಸುವ ಕೇಂದ್ರವೆನಿಸಿ ಮನಸು ಆನೆಗಳ ಪಡಿಪಾಟಲಿನತ್ತ ತಿರುಗುತ್ತದೆ.

ಹೀಗೆ ನೆನಪಿನ ಬೆನ್ನೇರಿ ಮೈಸೂರಿನಿಂದ ಹೆಚ್.ಡಿ.ಕೋಟೆ ದಾರಿ ಗುಂಟ ಹೊರಟರೆ ಥರಾವರಿ ಚಿಂತನೆಗಳು ಮುತ್ತಿಕೊಳ್ಳುತ್ತವೆ. ನೀವು ಸ್ಥಳೀಕರಾದರಂತೂ ಬಿಡದೆ ನೆನಪುಗಳು ಗರಿಬಿಚ್ಚಿಕೊಳ್ಳುತ್ತವೆ. ರಾಜರ ಕಾಲದ ಸಾಲುಮರಗಳು ಚರಿತ್ರೆಗೆ ಸಾಕ್ಷಿ ಆಗಿವೆ. ರಸ್ತೆ ಅಗಲಕ್ಕೆಂದು ಕೆಲವು ಮರಗಳು ಒರಗಿಬಿಟ್ಟಿವೆ. ಒರಗಿದ ಮರಗಳು ಆ ಚರಿತ್ರೆಯನ್ನು ತನ್ನೊಂದಿಗೆ ಷಾಮಿಲ್ ಕಡೆ ಕರೆದೊಯ್ದು ಬಿಟ್ಟಿವೆ. ಹೀಗಾಗಿ ಇಂದು ಈ ದಾರಿ ರಾಜ್ಯ ಹೆದ್ದಾರಿಯಾಗಿ ಪ್ರಮೋಷನ್ ಪಡೆದುಕೊಂಡಿದೆ. ಹೀಗಾಗಿಯೇ ಹತ್ತು ವರ್ಷದ ಹಿಂದೆ ಹಾಲು, ಮೊಸರು ಹೊತ್ತು ಬರುತ್ತಿದ್ದ ಸೈಕಲ್‌ಗಳು ಈಗ ಲೂನಾ, ಟಿವಿಎಸ್ ಮೋಟಾರ್ ಸೈಕಲ್‌ಗೆ ಬಡ್ತಿ ಪಡೆದಿವೆ. ಸೌದೆ ಹೂಡಿಕೊಂಡು ಬರುತ್ತಿದ್ದ ಎತ್ತಿನ ಗಾಡಿಗಳು ಅಲ್ಲೊಂದು ಇಲ್ಲೊಂದು ಕಾಣುತ್ತವೆ. ಊರೂರಿಗೊಂದು ಕೆಂಪು ಬಸ್ ಬಂದು ಪಟ್ಟಣಕ್ಕೆ ತಲುಪಲು ಸರಾಗದ ದಾರಿ ಆಗಿದೆ. ಆಜುಬಾಜಿನ ರಸ್ತೆಗಳಲ್ಲಿ ಅಂದು ಕಾಣುತ್ತಿದ್ದ 'ಉಳುವ ಯೋಗಿಯ' ನೋಡಲಾಗದು. ಅದರ ಬದಲು "ಫಾರಂ ಹೌಸ್" ಎಂಬ ಬಿನ್ನಾಣಗಿತ್ತಿ ಅಡರಿಕೊಂಡಿದ್ದಾಳೆ. ಅವುಗಳನ್ನು ಕಂಡು ಬೆರಗುಪಟ್ಟರೆ ಅದು ನಮ್ಮ, ನಿಮ್ಮದೇ ನಸೀಬು ಎಂದು ತಿಳಿಯದೆ ಗತಿ ಇಲ್ಲ!

ಹೀಗೆ ಸಾಗುತ್ತ ಹೊರಟರೆ ಅದೇ ಊರುಗಳು. ಅದೇ ಹಳ್ಳಿಗಳು, ಇದ್ದಂತೆ ಇವೆ. ಆದರೆ ಊರ ಮುಂದಿನ ಚಿತ್ರ ಒಂದಷ್ಟು ಮೈ, ಕೈ ತುಂಬಿಕೊಂಡಂತೆ ಕಾಣುತ್ತೇವೆ.

ಉದಾಹರಣೆಗೆ ಒಂದು ರೂಪಾಯಿ Coin ಹಾಕಿ ಗೋಡೆಗೆ ನೇತಾಕಿರುವ ಫೋನ್ ಮಾಡುವ ಡಬ್ಬ, ಕೆಲವು ಅಂಗಡಿಗಳಿಗೆ ಚನ್ನಾಗಿ ಬಣ್ಣಬಣ್ಣದಲ್ಲಿ ಬರೆಸಿದ ಬೋರ್ಡ್ ಇತ್ಯಾದಿ. ಇವೆಲ್ಲ ಬಸ್ಸಿನ ಕಾಲುಗುಣದಿಂದ ಆಯಾ ಊರಿಗೆ ಬಂದಿರಬಹುದು. ಅಥವಾ ಪಟ್ಟಣಕ್ಕೆ ಓಡಾಡಿಕೊಂಡು ಎದ್ದುಕೊಂಡವರ ಕಾಲು ನಡೆಯಿಂದಲೂ ಬಂದಿರಬಹುದು.

ಅದೇನೇ ಇರಲಿ ಹೆಚ್.ಡಿ.ಕೋಟೆಯ ರಸ್ತೆ, ರಾಜಮಹಾರಾಜರು ನಡೆದಾಡಿದ ದಾರಿ ಎಂಬ ಬಿಗುಮಾನದಲ್ಲಿರುವುದಂತೂ ಕಾಣುತ್ತದೆ. ಇದೇ ರಸ್ತೆಯಲ್ಲಲ್ಲವೇ ನಮ್ಮ ಜಂಬೂಸವಾರಿಯ ಆನೆಗಳು ಬರುವುದು ಎಂಬುದ ನೆನೆದು ಮನಸ್ಸು ಪುಳಕಗೊಳ್ಳುತ್ತದೆ. ಹೀಗೆ ನೆನೆಯುತ್ತಾ ಮೈಸೂರಿನ ಚರಿತ್ರೆಯ ಲೋಕದಲ್ಲೊಮ್ಮೆ ಸುತ್ತಾಡಿ ಬರುವುದರ ಒಳಗೆ ನೀವು ಹ್ಯಾಂಡ್‌ಪೋಸ್ಟ್‌ನಲ್ಲಿ ಇರುತ್ತೀರಿ. ಅದೇ ವೃತ್ತ. ಒಂದು ಕಡೆ ಕೋಟೆಗೂ, ಒಂದು ಮಾದಾಪುರದ ಕಡೆಗು, ಮತ್ತೊಂದು ಸರಗೂರಿನ ಕಡೆಗೂ ಇನ್ನೊಂದು ಮೈಸೂರ ಕಡೆಗೂ ಕೈ ತೋರಿ ನಿಂತಿರುವ ನಾಲ್ಕು ಕಂಬದ 'ಸರ್ಕಲ್' ನಿಮ್ಮ ಗಮನ ಸೆಳೆಯುತ್ತದೆ. ನೀವು ಒಂದು ಕಾಲದ ವಯಸ್ಕರ ಶಿಕ್ಷಣ ಕ್ಷೇತ್ರದ ಭಿತ್ತಿಪತ್ರವನ್ನು ನೆನೆಯುವಿರಾದರೆ **"ದಾರಿ ಯಾವುದು?"** ಎಂಬ ಭಿತ್ತಿಪತ್ರದ ನೆನಪಾಗುತ್ತದೆ.

ಅಂದು ಗೆಂಡತ್ತೂರು ಎಂಬ ವಿಶೇಷವಾದ ಮೈಸೂರಿನ ಈ ಕಡೆ ಭಾಗದ ಹಳ್ಳಿಯ ಕುರಿತು ನಾವು ಪ್ರವಾಸ ಹೊರಟಾಗ ರಸ್ತೆಯುದ್ದಕ್ಕೂ ಕಾಡಿದ ಕೆಲವೇ ಚಿತ್ರಣಗಳಿವು. ಈ ನಾಲ್ಕು ತೋರುಗೈನ ಸರ್ಕಲ್‌ನ್ನು ದಾಟಿ ನಾವು 'ಕಾರಾಪುರ' ರಸ್ತೆ ಹಿಡಿದು ಮುನ್ನೆಡೆದಾಗ ಅಷ್ಟು ಇಷ್ಟು ಅದೇ ಮೌನ, ಮತ್ತೆ ನೆಮ್ಮದಿ ಸೂಸುತ್ತ ನಿಂತಿರುವ ಹಳೇ ಮರಗಳ ಸಾಲು ಮುದ ನೀಡುತ್ತವೆ. ಇಲ್ಲಿಂದೀಚೆಗೆ ಗೆಂಡತ್ತೂರಿನ ತನಕ ರಸ್ತೆಯನ್ನು ಗೇಲಿ ಮಾಡಿಕೊಂಡು ಗಾಡಿ ಓಡಿಸಬೇಕು. ಏಕೆಂದರೆ ಅದು ನಮ್ಮ ಸರ್ಕಾರಿ ಇಲಾಖೆಯ ನಿವೃತ್ತಿಯ ಅಂಚಿನಲ್ಲಿರುವ ಗುಮಾಸ್ತರ ಥರ ಎಲ್ಲಾ ನಿರೀಕ್ಷೆಗಳನ್ನು ಬದಿಗೊತ್ತಿ 'ಉಳಿದಂತೆ ಬಾಳು' ಎಂಬಂತೆ ನಿಸ್ತೇಜವಾಗಿದೆ.

ನೆನಪಾಗುವಾಗಲೇ ಇನ್ನೊಂದು ಮಾತು. ಇದು ನೀವು ಸಾಹಿತ್ಯದ ವಿದ್ಯಾರ್ಥಿಗಳಾಗಿದ್ದರೆ ಕನ್ನಡಕ್ಕೆ ಆಸ್ತಿಯಾಗಿ ಒಲಿದ ಮಾಸ್ತಿ ಅವರು ಮತ್ತು ಅವರ 'ಕಾಕನಕೋಟೆ' ನಾಟಕ ತೆರೆದುಕೊಳ್ಳುತ್ತದೆ. ಮೈಸೂರು ರಾಜರ ಜೊತೆ ಅನುಸಂಧಾನ ಮಾಡಿಕೊಂಡು ಬಾಳಿ ಬದುಕಿದ, ತಾನೂ ತನ್ನೊಳಗೊಂದು ಚರಿತ್ರೆಯನ್ನು ಕಟ್ಟಿಕೊಂಡು ಹೋಗಿರುವ ಕಾಡಿನ ಬದುಕು - ಬವಣೆಯನ್ನು ಕಾಕಾ ಮತ್ತು ಅವನ ಹಾಡಿ ಜನತೆಯ ಚಿತ್ರಣಗಳು ಬಂದು ಹೋಗುತ್ತವೆ. ಇವು ಈ ರಸ್ತೆಗುಂಟ ನಡೆಯುವ ನಿಮ್ಮ ಚಿಂತೆ ಹಾಗೂ ಮಾತುಕತೆಗಳದೇ ಮೇಲುಗೈ. ಬಸ್ಸಿಗಿಂತ ಕಾರಿನಲ್ಲಿ ಹೊರಟರೆ ಗಿಡ ಮರಗಳ ಮಧ್ಯೆ ತೂರಿ ಬರುವ ಬಿಸಿಲು ನೆರಳಿನಾಟವನ್ನು ಜೊತೆ ಜೊತೆಯಾಗೇ ನಡೆಸಿಕೊಂಡು ಹೋಗಬಹುದು. ಹೀಗಿರುವಾಗ ಕಬಿನಿ ಅಣೆಕಟ್ಟು ಬಂದೇ ಬಿಡುತ್ತದೆ. ಒಂದು ಕಡೆ ಅಣೆಕಟ್ಟು ಮತ್ತದರ ಮಗ್ಗಲ್ಲಲ್ಲೇ ಕಬಿನಿ ಕಾಲೋನಿ. ಕಾಲೋನಿ ಎಂದರೆ ತಣ್ಣನೆ ಒಂದು ಕೂಗಳತೆ ದೂರದಲ್ಲಿ ವಿಸ್ತರಿಸಿಕೊಂಡಿರುವ ಒಂದು ಗಜಗಾತ್ರದ ವಠಾರ ಅಷ್ಟೆ. ನೀರಿನ ಮೇಲಿನ ಗಾಳಿ ಬೀಸುವುದರಿಂದಲೂ, ಅಥವಾ ಗಜಗಾತ್ರದ ಮರಗಳು ಇನ್ನು ಹಾಗೇ ಎಲ್ಲವನ್ನು ಕಣ್ಣಿಂದ ನೋಡುತ್ತ ನಿಂತಿರುವುದರಿಂದಲೋ ಕಾಲೋನಿಯನ್ನು ದಾಟುವಾಗ ತಣ್ಣನೆಯ ಅನುಭವ ನಿಮಗಾಗುತ್ತದೆ.

ಇನ್ನು ಮುಂದಿನದೆಲ್ಲಾ ಇರುವ ರಸ್ತೆಯನ್ನು ನಿಮ್ಮ ವಾಹನಕ್ಕೆ ಹೊಂದಿಸಿಕೊಂಡು

ಹೋಗುವುದಷ್ಟೆ. ಮೈರಾಡ ಸಂಸ್ಥೆ ಮತ್ತು ವಿವೇಕಾನಂದ ಗಿರಿಜನರ ಅಭಿವೃದ್ಧಿ ಸಂಸ್ಥೆಗಳ ಮುತುವರ್ಜಿಗೆ ಒಳಪಟ್ಟು ಒಂದಷ್ಟು ರಸ್ತೆ ಮತ್ತು ರಸ್ತೆಯಂಚಿನ ಭಾಗಗಳು ಇನ್ನು ಉಳಿದುಕೊಂಡಿರಬಹುದು. ಅತ್ಯಂತ ಸೋಜಿಗವೆಂದರೆ ನೀವು ಹೀಗೆ ಪ್ರಯಾಣಿಸುತ್ತಿದ್ದಂತೆಯೆ ಗುಂಡಿ ಕೊರಕಲುಗಳ ಎದ್ದು ಬಿದ್ದು ನಿಮ್ಮ ವಾಹನ ಚಲಿಸುತ್ತಿದ್ದರೂ ಕೊಂಚವೂ ದಣಿವಾಗದು. ಅಷ್ಟರಮಟ್ಟಿಗೆ ಇಲ್ಲಿನ ವಾತಾವರಣ, ಗಾಳಿ ನಿಮ್ಮ ಜೀವ ತುಂಬಿಕೊಡುತ್ತದೆ. ಆದರೆ ಜನರ ಜೀವನ ಮಟ್ಟದ ವಿಚಾರ ಬಂದಾಗ ಈ ಮಾತು ಹೇಳುವುದು ಸ್ವಲ್ಪ ಕಷ್ಟವೇ. ಏಕೆಂದರೆ ಇಲ್ಲಿನ ಜನ, ಹಳ್ಳಿಗಳು ಸಾಧಾರಣವಾಗಿ ಹೊಟ್ಟೆಗೆ ಬಟ್ಟೆಗೆ ನೇರವಾಗಿರುವುದನ್ನು ಬಿಟ್ಟರೆ, ಉಳಿದವರು ಬುಡಕಟ್ಟಿನ ಜನಸಮುದಾಯಗಳು, ಇಲ್ಲವೇ ಹಾಡಿಗಳು. ಈ ಭಾಗದಲ್ಲಿ ಕೆಲವು ಕಡೆಗೆ ಅಣೆಕಟ್ಟು ಬಂದು ಸುಖವನ್ನೇನು ನೀಡಿದಂತಿಲ್ಲ. ಕಬಿನಿ ಹಿನ್ನೀರು ಒಂದಷ್ಟು ಹಳ್ಳಿಗಳನ್ನು ಆಚೀಚೆ ಮಾಡಿಬಿಟ್ಟಿತ್ತು. ಅಂಥವರಿಗೆ ಸರ್ಕಾರ ಒಂದಷ್ಟು ಜಮೀನು ಸವಲತ್ತುಗಳನ್ನು ಕೊಟ್ಟಿರುವುದು ನೆನಪಿಗೆ ಬರುತ್ತೆ. ಉಳಿದ ಕಡೆ ಮೈರಾಡವೂ ಸೇರಿದಂತೆ ನಾಕಾರು ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರದ ಸವಲತ್ತುಗಳನ್ನು ಈ ಜನಮನಕ್ಕೆ ಮುಟ್ಟುವಂತೆ ನೋಡಿಕೊಳ್ಳುತ್ತಿರುವುದನ್ನು ಕಾಣಬಹುದು.

ಹೀಗೆ ಸುಮಾರು 80-90ಕಿ.ಮೀ. ಪ್ರಯಾಣ ಸಾಗುವ ಕಡೆ ಗಳಿಗೆಗೆ. ಈ ನಮ್ಮ ಗೆಂಡತ್ತೂರು ಬಂದು ಬಿಡುತ್ತದೆ. ಈಗ ಹದಮಾಡಿರುವ ಮಣ್ಣಿನ ದಾರಿಯಲ್ಲಿ ಧೂಳು ಎಬ್ಬಿಸುತ್ತಾ ಸಾಗಬೇಕು. ಇಕ್ಕೆಲಗಳಲ್ಲಿ ಹೊಲ, ಗಿಡಮರ ತುಂಬಿಕೊಂಡಿರುವ ಜಮೀನು, ಬಯಲು. ನಾವಾಡುವ ಮಾತು ಮಾತ್ರ ನಮ್ಮೊಂದಿಗಿನ ವಾಹನದ ಶಬ್ಧ ಬಿಟ್ಟರೇ ಇನ್ಯಾವ ಅಸಹಜ ಶಬ್ದವೂ ತಾಕುವುದಿಲ್ಲ. 'ಶಬ್ಧದೊಳಗಣ ನಿಶ್ಯಬ್ದ' ಎಂಬ ವಚನದ ಸಾಲಿನ ಸಾಕ್ಷಿರೂಪದಂತೆ. ನಗರಗಳಲ್ಲಿ ಎಂದೂ ಕಾಣದಂತ ದೈತ್ಯಗಾರದ ಮರಗಳು ಕಣ್ಣುತುಂಬಿಕೊಳ್ಳುತ್ತವೆ. ಇದು ಅಲ್ಲೇ ಬದುಕುವವರ ಅದೃಷ್ಟ. ಮೇಲೆ ಮುಗಿಲು, ಕೆಳಗೆ ಭೂಮಿ. ಸುತ್ತಲೂ ಬಗೆ ಬಗೆಯ ಹಸಿರು ವನ, ಕಾಡು, ತೋಪುಗಳ ಸವಿಯುತ್ತಾ ಜೀವಿಸುತ್ತಿದ್ದಾರೆ. ಪಟ್ಟಣವಾಗಬೇಕೆಂಬ ಬಯಕೆ ಒಳಗಿದ್ದರೂ ಅವಕಾಶವಿಲ್ಲದೆ, ಮಕ್ಕಳು ಮರಿಗಳು ತೊಂಡೆ ಹಣ್ಣಿನಂತೆ ಮೈ ಕೈ ತುಂಬಿಕೊಂಡು ಹೊರಗಿನಿಂದ ಬಂದವರನ್ನು ಬೆರಗುಗಣ್ಣಲ್ಲಿ ನೋಡುತ್ತಾ ನಿಂತಿರುತ್ತವೆ. ಹೆಣ್ಣು ಗಂಡುಗಳಲ್ಲಿ ಏನೋ ಒಂದು ಬಗೆಯ ಜೀವನೋತ್ಸಾಹ ಕಾಣುತ್ತದೆ. ಆ ವಾತಾವರಣವೇ ಹಾಗೆ ಅವರನ್ನು ಗಟ್ಟಿಮುಟ್ಟಾಗಿರಿಸಿರಬೇಕು ಎಂದು ಕುತೂಹಲವಾಗುತ್ತದೆ. ಒಟ್ಟಿನಲ್ಲಿ ಅಲ್ಲಿನ ನಿಶಬ್ಧ, ಮೌನ ಅನುಭವಿಸಿದಷ್ಟೂ ಸಿಗುತ್ತದೆ. ಇದೂ ಕನ್ನಡದ ನೆಲವೆ. ನೀವು ಆ ಪ್ರಕೃತಿಯ ಸೊಬಗನ್ನು ನೋಡುತ್ತಾ (ಉಳಿದಿರುವಷ್ಟು) ಮೈ ಮರೆತರೆ ಕೇರಳದ ಒಂದು ಬೀದಿಗೆ ಬಂದಾಂತಾಗುತ್ತದೆ. ಏಕೆಂದರೆ ಗಂಡಸರ ಮತ್ತು ಕೆಲವು ಯುವಕರ ಉಡುಗೆ-ತೊಡುಗೆ, ಆ ಉಡುಗೆ ತೊಡಿಗೆಗಳ ಬಣ್ಣ. ಹೀಗೆ ನಿಮ್ಮ ಕಣ್ಣು ತಪ್ಪಿಸಿ, ಕೇರಳದ ಒಂದು ಬೀದಿಗೆ ಬಂದಂತೆ ತೋರುತ್ತದೆ.

ಆದರೆ ಅವರನ್ನು ಮಾತಾಡಿಸಿದ ಕೂಡಲೇ 'ಕನ್ನಡದ' ಮಾತು ಹೊರಡಲಾಗಿ ಇದೂ ನಮ್ಮ ಕನ್ನಡದ ಊರೇ. ಅಂಚಿನಲ್ಲಿರುವ ಕಾರಣಕ್ಕೆ ಕೇರಳಕ್ಕೆ ಅಂಟಿಕೊಂಡಿರುವುದರಿಂದ ಹೀಗೆ ಆಗಿರಬಹುದು ಎನಿಸುತ್ತದೆ. ಕಬಿನಿ ಹಿನ್ನೀರಿನ ಹೊಳೆ ದಾಟಿದರೆ, ಅದೋ ನಿಮಗೆ ಅಲ್ಲಿ ಕೇರಳದ ನೆಲ ಕಂಡೇ ಬಿಡುತ್ತದೆ. ಕಬಿನಿಯ ಹಿನ್ನೀರು ಅತ್ತಾ ಕಾಕಾನಕೋಟೆಯ ಕಾಡನ್ನು, ಇತ್ತಾ ಈ ಗೆಂಡತ್ತೂರನ್ನು ಇರಿಸಿ, 'ತೆಪ್ಪ'ದಲ್ಲಿ ಹೋಗಿಬರುವುದಕ್ಕೆ ಅವಕಾಶ

ನೀಡಿದೆ. ಗೆಂಡತ್ತೂರಿನಿಂದ ಬಂದು ಹೋಗುವ ಒಂದು ಬಸ್ಸು ನಂಬಿದರೆ ಅಷ್ಟೆ. ನಿಮ್ಮ ಕೆಲಸ ಆಗಲೂಬಹುದು. ಆಗದೇ ಇರಲೂಬಹುದು. ಅದಕ್ಕೆ ಗೆಂಡತ್ತೂರಿನಿಂದ ಆಜುಬಾಜಿನ ಊರಿಗೆ ಅಂದರೆ ಕಬಿನಿಯ ಆಚೆ ಕಡೆಗೆ ಹೋಗಿ ಬರಲು 'ಅಂಬಿಗ ನಾ ನಿನ್ನ ನಂಬಿದೆ' ಎಂದು ಕೊಂಡು 'ತೆಪ್ಪ'ದಲ್ಲಿ ಓಡಾಡಿಕೊಂಡಿರುತ್ತಾರೆ. 'ತೆಪ್ಪ'ದವರಿಗೂ ಅಷ್ಟೆ. ಈ ಊರಿನ ಜನರನ್ನು ನಂಬಿದರೆ ಮುಗಿತು. ಇವರಲ್ಲಿ ಆ ಊರು ಈ ಊರಿಗೆ ಹೋಗಿ ಬರುವುದು ಅಷ್ಟರಲ್ಲೇ ಇದೆ. ಪ್ರವಾಸಿಗರೇ ಪುಣ್ಯಾತ್ಮರು. ಅವರೇ ತನ್ನ ತೆಪ್ಪಕ್ಕೆ ನಾಕು ಕಾಸು ತಂದುಕೊಡುವವರು ಎಂದು ಮನಸಾರೆ ಹೊಗಳುತ್ತಾರೆ. ತೆಪ್ಪದಲ್ಲಿ ಕೂರಿಸಿಕೊಂಡು ಗಿರಿಗಿಟ್ಲೆ ಹೊಡೆಸಿದರೆ ಪ್ರವಾಸಿಗರು ನೀಡುವ 'ಟಿಪ್ಸ್' ಮುಂದೆ ಇದೆಲ್ಲ ತನ್ನೂರಿನ ಜನ ಕೊಸರಾಡಿಕೊಂಡು ಕೊಡುವ ಪುಡಿಗಾಸು 'ಕ್ಯಾಬಿನಯಿ' ಎಂಬಂತೆ ಹೇಳುತ್ತಾನೆ. ಅಲ್ಲಿ ಪ್ರವಾಸಿ ತಾಣವಾಗುವ ಎಲ್ಲಾ ಅವಕಾಶಗಳು ಇರುವುದನ್ನು ಅವರದೇ ಆದ ರೀತಿಯಲ್ಲಿ ಭಿತ್ತರಿಸುತ್ತಾರೆ. ಆನೆ ಹಿಂಡು ಹಿಂಡಾಗಿ ಬರುವುದು. ನೀರು ಕುಡಿದು, ನೀರು ಮಿಂದು ಹೋಗುವುದು. ಅದಕ್ಕೆ ಪ್ರವಾಸಿಗರು ಕಾದು ಕುಳಿತು ನೋಡುವುದು. ವನ್ಯ ಜೀವಿ ಛಾಯಾಗ್ರಾಹಕರು ಬಂದು ಹೋಗುವುದು. ಶ್ರೀಮಂತರು ನಗರದ ಜಂಜಾಟದಿಂದ ಬಿಡಿಸಿಕೊಂಡು ಮೋಜು ಮಾಡಲು ಬರುವವರು. ಅವರಿಗಾಗಿ ಇರುವ ರೆಸಾರ್ಟ್, ಇವೆಲ್ಲ ಮಾಹಿತಿಯನ್ನು ಅಂಬಿಗನು ತೆಪ್ಪದಲ್ಲೇ ಕುಳಿತು ವಿವರಿಸುತ್ತಾನೆ. ಬಂದು ಹೋಗುವ ಪ್ರವಾಸಿಗರಿಗೆ ಆ ಲೋಕಲ್ ಕೋಚ್ ನೆನಪಿನಲ್ಲಿಳಿಯುತ್ತಾನೆ.

ಗೆಂಡತ್ತೂರನ್ನು ಇಂಥ ರಮಣೀಯ ಸನ್ನಿವೇಶ ಅವಕಾಶಗಳು ಸುತ್ತುಕೊಂಡಿರುವುದರಿಂದ ಇದೆಲ್ಲ ನೆನಪಿಗೆ ಬಂತು ಇರಲಿ. ಈಗ ಗೆಂಡತ್ತೂರಿನ ಚರಿತ್ರೆಯ ದಿಕ್ಕಿಗೆ ಬಂದು ಕಣ್ಣು ಹಾಯಿಸಿ ನಾವು ಗೆಂಡತ್ತೂರಿಗೆ ಬಂದ ಕಾರಣಕ್ಕೆ ಇಳಿಯಬೇಕು. ಗೆಂಡತ್ತೂರು ಇನ್ನೂರ ಮನೆಗಳಿರುವ ಒಂದು ಪುಟ್ಟ ಗ್ರಾಮ. ಹಿಂದೆಯೇ ಹೇಳಿದಂತೆ ಇಡೀ ಊರು ನೆಲ ನಂಬಿ ಬದುಕು ಸಾಗಿಸುತ್ತದೆ. ಮಳೆ ಬರಬೇಕು ಬೆಳೆ ಕಾಣಬೇಕು. ಮಕ್ಕಳಿಗಾಗಿ ಶಾಲೆ ಇದೆ. ಸುತ್ತಲೂ ಕಣ್ಣು ಹಾಯಿಸಿದಷ್ಟು ನೀರು. ಕಬಿನಿ ಹಿನ್ನೀರು. ಆರಂಭಕ್ಕೆ ಕುಡಿಯುವುದರಿಂದ ಹಿಡಿದು ಮನೆಯ ಎಲ್ಲಾ ವಹಿವಾಟಿಗೂ ಅಲ್ಲಿಯದೇ ನೀರು.

ಮೈರಾಡದ ಪ್ರೇರಣೆ ಮತ್ತು ಶ್ರಮದಿಂದಾಗಿ ಸ್ವಸಹಾಯ ಸಂಘಗಳು ಬಂದಿವೆ. ಕುಡಿಯಲು ಬೋರ್‌ವೆಲ್ ನೀರಿದೆ. ಪೈಪ್ ಎಳೆದು ಬೋರ್‌ವೆಲ್ ನೀರು ಕುಡಿಯಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿ, ಮೈಸೂರು ಅನುಕೂಲ ಮಾಡಿದೆ. ಬೋರ್‌ವೆಲ್ ವ್ಯವಸ್ಥೆಯೆಲ್ಲಾ ಇತ್ತೀಚಿಂದು ಅದಕ್ಕೆ ಮುಂಚೆ ಕಬಿನಿ ಹಿನ್ನೀರೇ ಸರ್ವಸ್ವ! ಈ ಊರು ಅತಿ ಪ್ರಾಚೀನವಾದದ್ದೇನಲ್ಲ. ಹಿರಿಯ ತಲೆಗಳು ದೊಡ್ಡ ಬೈರನ ಕುಪ್ಪೆಯಿಂದ ತಾವು ಇಲ್ಲಿಗೆ ಬಂದು ನೆಲ ನಿಂತದ್ದನ್ನು ತಿಳಿಸುತ್ತವೆ. ಅದಕ್ಕೆ ಮುಂಚೆ ಚಿತ್ರದುರ್ಗಾ ಮೂಲದ ಕಡೆ ಬೊಟ್ಟು ಮಾಡಿ ತೋರಿಸುತ್ತದೆ. ಅಂದರೆ ಹೈದರ್/ಟಿಪ್ಪುವಿನ ಕಾಲದ ಚರಿತ್ರೆಯ ಕಡೆ ಅವರ ಮಾತು ತಿರುಗುತ್ತದೆ. ನಾವು ಮೂಲ ಅತ್ತಲಿನವರು. ಆಗ ಹೈದರನ ಬೆದರಾಣಿಕೆಯನ್ನು ಎದುರಿಸಲಾಗದೆ ದೊಡ್ಡಬೈರನಕುಪ್ಪೆ ಕಡೆಗೆ ಬಂದು ಕೇರಳದ ಆಜು ಬಾಜಿನಲ್ಲಿ ಒಂದಷ್ಟು ಉಳಿದು, ಮತ್ತೆ ಕವಲೊಡೆದು ಹಲವು ಕಾರಣಗಳಿಂದ ಗೆಂಡತ್ತೂರಿಗೆ ಬಂದುದಾಗಿ ಅವರ ಚರಿತ್ರೆ ತೆರೆದುಕೊಳ್ಳುತ್ತದೆ. ಹೀಗೆ ಬಂದುದಕ್ಕೆ ಇಲ್ಲಿನ ಸ್ಥಳೀಕರು 'ಓಡಿಗೌಡ'ರೆಂದು ಕರೆಯುತ್ತಾರೆ. ಅದಕ್ಕೆ ಇವರಿಗೆ ಕೊಂಚ ಮುಜುಗರವು ಇದ್ದಂತಿದೆ.

ತಾವು ಇಲ್ಲಿನವರೆ. ಕಾಲ ಮಹಿಮೆ ಹೀಗಾಗಿ ಇಲ್ಲಿಗೆ ಬಂದೆವು. ಆದರೆ ಓಡಿ ಬಂದವರೆಂದು ಸ್ಥಳೀಯರು ಅದರಲ್ಲೂ ಹಿಂದಿನವರು ಕರೆಯುತ್ತಿದ್ದರು. ಆ ಶಬ್ದ ಸೂಚಕ ನಮಗಲ್ಲ ಎಂದು ಆ 'ಓಡಿಗೌಡ' ಎಂದು ಕರೆಯುವುದನ್ನು ನಯವಾಗಿ ತಿರಸ್ಕರಿಸುತ್ತಾರೆ.

ಒಂದರ್ಥದಲ್ಲಿ ಕಾಲದ ಒಂದು ಚರಿತ್ರೆಯನ್ನು ಮೈಸೂರು ಜಿಲ್ಲೆಯ ಆ ಅಂಚಿನಲ್ಲಿ ಕೂತು ಹೇಳುತ್ತಾರೆ. ಇವರು ಹೇಳುವ ಚರಿತ್ರೆಯ ಕಥೆಯನ್ನು ತೆಗೆದು ನೋಡಿದಾಗ, ಅದು ಹೀಗೆ ದಾಖಲಾಗಿದೆ. ಅದು 1779ರ ಕಾಲದಲ್ಲಿ ಘಟಿಸಿದ್ದು.

ಆಗ ಸಾಮ್ರಾಜ್ಯ ವಿಸ್ತರಣೆಯ ತನ್ನ ಕನಸಿನಲ್ಲಿ ಹೈದರ್ ದಂಡಯಾತ್ರೆಗಳನ್ನು ನಡೆಸುತ್ತಿರುತ್ತಾನೆ. ಹೈದರಿನಿಗೆ ತನ್ನ ಕನಸಿನ ಶಕ್ತಿಯುತ ರಾಜ್ಯವನ್ನು ಕಟ್ಟುವುದಕ್ಕೆ ಇನ್ನು ಎರಡು ಸ್ಥಳಗಳನ್ನು ಗೆಲ್ಲುವುದು ಉಳಿದಿರುತ್ತದೆ. ಅವೇ ಚಿತ್ರದುರ್ಗ ಮತ್ತು ಕಡಪಾ. ಚಿತ್ರದುರ್ಗಾ ಕೋಟೆಯನ್ನು ಭೇದಿಸುವುದು ಸುಲಭವಾಗಿರಲಿಲ್ಲ. ಅದು ಬಹಳ ಎತ್ತರವಾದ ಬೆಟ್ಟದ ಮೇಲಿತ್ತು. ಯಾವ ಕಡೆಯಿಂದಲೂ ಸುಲಭವಾಗಿ ಹೋಗಲು ಸಾಧ್ಯವಿರಲಿಲ್ಲ. ಅಲ್ಲಿಯ ಹೆಬ್ಬಂಡೆಗಳ ರಚನೆ, ವಿನ್ಯಾಸ ಹೇಗಿತ್ತೆಂದರೆ, ಆಕ್ರಮಣ ತೀರಾ ದುಸ್ಸಾಧ್ಯವಾಗಿತ್ತು. ಆದರೆ ಹೈದರಿನಿಗೆ ಅದನ್ನು ಗೆಲ್ಲಲೇಬೇಕೆಂಬ ಅದಮ್ಯ ಬಯಕೆ. ತನ್ನ ವಿರುದ್ಧವಾಗಿ ಮಾಧವರಾಯನೊಂದಿಗೆ ಸೇರಿಕೊಂಡ ಪಾಳೆಯಗಾರ ಮದಕರಿನಾಯಕನಿಗೆ ತಕ್ಕ ಶಿಕ್ಷೆ ಮಾಡಬೇಕೆಂದು ಹೈದರ್ ತೀರ್ಮಾನಿಸಿದ್ದನು. ಮೈಸೂರು ಸೈನ್ಯವು ಮೂರುತಿಂಗಳ ಕಾಲ ದುರ್ಗಕ್ಕೆ ಮುತ್ತಿಗೆ ಹಾಕಿತು. ನೇರ ಆಕ್ರಮಣ ಕಷ್ಟವೆನಿಸಿದಾಗ ದುರ್ಗದೊಳಕ್ಕೆ ಹೋಗುವ ಆಹಾರ ಪದಾರ್ಥಗಳೆಲ್ಲವನ್ನೂ ಮೈಸೂರು ಸೇನೆಯು ತಡೆಗಟ್ಟಿತು. ನಾಯಕನ ಸ್ಥಿತಿ ಕಷ್ಟಕ್ಕಿಟ್ಟುಕೊಂಡಿತು. ಸಾಕಷ್ಟು ಮೊತ್ತದ ಒತ್ತೆ ಹಣ ಕೊಡುವುದಾಗಿಯೂ ಮುಂದಕ್ಕೆ ಮೈಸೂರಿಗೆ ನಿಷ್ಠೆಯಿಂದಿರುವುದಾಗಿಯೂ ಹೇಳಿಕಳಿಸಿದನು. ಹೈದರ್ ಆ ಗಳಿಗೆಗೆ ಅದನ್ನು ಒಪ್ಪಿಕೊಂಡನು. ಇಷ್ಟಾದರೂ, ಕಡಪಾ ಮತ್ತು ಚಿತ್ರದುರ್ಗಾಗಳ ಪರಿಸ್ಥಿತಿ ಹೈದರನಿಗೆ ತೃಪ್ತಿಕರವಾಗಿ ಕಾಣಲಿಲ್ಲ. ಎರಡೂ ಸ್ಥಳಗಳ ನಾಯಕರು ಮರಾಠರ ವಿರುದ್ಧವಾಗಿ ತನ್ನೊಂದಿಗೆ ಸೇರಿಕೊಳ್ಳಬೇಕೆಂದು ನೀಡಿದ ಕರೆಗೆ ಸ್ಪಂದಿಸಿರಲಿಲ್ಲ. ಆದ್ದರಿಂದ ಅವರಿಬ್ಬರನ್ನೂ ಶಿಕ್ಷಿಸಬೇಕೆಂದು ಹೈದರ್ ನಿರ್ಧರಿಸಿದನು. ಚಿತ್ರದುರ್ಗವನ್ನು ಆಕ್ರಮಣ ಮಾಡಿದನು.

ಮುತ್ತಿಗೆ ಬಹಳ ಕಾಲ ಮುಂದುವರಿಯಿತು. ಆಕ್ರಮಣ ಮಾಡಿದ ಸೈನ್ಯವು ಮೊದಲು ಆಸುಪಾಸಿನ ಕಾಡುಗಳನ್ನು ಕಡಿದು ಬೆಟ್ಟದ ಇಳುಕಲಲ್ಲಿ ಬತೇರಿಗಳನ್ನು ಕಟ್ಟಿ ಅವುಗಳ ಮೇಲೆ ಫಿರಂಗಿಗಳನ್ನು ಜೋಡಿಸಿ ಕೋಟೆಯ ಗೋಡೆಗೆ ಹೊಡೆಯ ತೊಡಗಿತ್ತು. ಕೋಟೆಯ ಗೋಡೆಯನ್ನು ಎಲ್ಲಾದರೂ ಸ್ವಲ್ಪ ಜಖಂ ಮಾಡಿದರೆ, ಉರುಳಿಸಿದರೆ ದುರ್ಗದ ಕಾರ್ಯಾಗಾರರು ಇಡೀ ರಾತ್ರಿ ಕೆಲಸ ಮಾಡಿ ಹೊಸ ಗೋಡೆಯನ್ನು ಕಟ್ಟಿಬಿಡುತ್ತಿದ್ದರು. ಪ್ರತಿದಿನ ಕೋಟೆಯಿಂದ ಹೊರಕ್ಕೆ ಬಂದು ಇವರು ನಿರ್ಮಿಸಿದ್ದ ಬತ್ತೇರಿಗಳ ಕಾವಲುಗಾರರನ್ನು ಹೆದರಿಸಿ ತಲ್ಲಣಗೊಳಿಸಿ ಗೊಂದಲವುಂಟುಮಾಡಿ ಹೊರಟುಹೋಗುತ್ತಿದ್ದರು. ಕೋಟೆಯನ್ನು ವಶಪಡಿಸಿಕೊಳ್ಳಲು ಇವರು ಮಾಡಿದ ಪ್ರಯತ್ನಗಳೆಲ್ಲವನ್ನೂ ಅವರು ನಿಷ್ಫಲಗೊಳಿಸಿದರು. "ಕೋಟೆಯ ಮೂಗಿನ ಹಾಗಿರುವ ಬತ್ತೇರಿಯನ್ನು" ಹೇಗಾದರೂ ಕೈವಶಪಡಿಸಿಕೊಳ್ಳಬೇಕೆಂದು ಹೈದರನು ಮುಹಮ್ಮದ್ ಅಲಿಗೆ ಆಜ್ಞಾಪಿಸಿದನು. ಇಡೀ ಕೋಟೆಯ ಸಾಮರ್ಥ್ಯವೆಲ್ಲ ಆ ಬತ್ತೇರಿಯ ಮೇಲೆ ನಿಂತಿದ್ದಿತು. ಮುಹಮ್ಮದ್ ಅಲಿಯು ಅದನ್ನು ಸಾಧಿಸಿದನು. ಅಲ್ಲಿಂದ ಕೋಟೆಯೊಳಕ್ಕೆ ಪದಾರ್ಥಗಳು ಹೋಗುವುದನ್ನು ತಡೆಗಟ್ಟಲು ಸಾಧ್ಯವಾಯಿತು. ಕೊನೆಗೆ

ಬಲವಾದ ಆಕ್ರಮಣ ಮಾಡಲು ಆಜ್ಞೆ ಮಾಡಿದನು. ಉಗ್ರವಾದ ಕಾಳಗದಲ್ಲಿ ಚಿತ್ರದುರ್ಗ ಪತನಗೊಂಡಿತು. ರಾಜನನ್ನು ಸೆರೆ ಹಿಡಿಯಲಾಯಿತು. ಅವನನ್ನು ಕುಟುಂಬ ಸಮೇತ ಶ್ರೀರಂಗಪಟ್ಟಣಕ್ಕೆ ಕಳುಹಿಸಿದನು. ಚಿತ್ರದುರ್ಗವನ್ನು ವಶಪಡಿಸಿಕೊಂಡದ್ದು ಬಹು ಕಷ್ಟದ ಕೆಲಸವೇ ಆಯಿತು. ಸೇನೆಯ ಸಾಮರ್ಥ್ಯದ ಜೊತೆಗೆ ಹೈದರನ ಬುದ್ದಿ, ಕೌಶಲವೆಲ್ಲವೂ ಉಪಯೋಗವಾಗಬೇಕಾಯಿತು. ಚಿತ್ರದುರ್ಗ ಪತನ ಹೊಂದಿದ್ದು ೧೭೭೯ ಮಾರ್ಚಿ ತಿಂಗಳಲ್ಲಿ"

**(ಕರ್ನಾಟಕ ಚರಿತ್ರೆ: PP-70-71:ಹಂಪಿ. ವಿ.ವಿ.)**

ಈ ಚರಿತ್ರೆ ನೋಡಿದ ಯಾರಿಗೇ ಇದೂ ಚಿತ್ರದುರ್ಗ ಪತನದ ಕಾಲಘಟ್ಟದಲ್ಲಿ ಸಹಜವಾಗೇ ಪಲಾಯನ ಮಾಡಿದ ತಂಡಗಳಲ್ಲಿ ಇವರು ಒಬ್ಬರಾಗಿದ್ದಿರಬಹುದೆಂಬ ಮಾತಿಗೆ ರುಜು ಸಿಕ್ಕುತ್ತದೆ. ಇಷ್ಟಾದರೂ ಅವರ ದೂರು ಇರುವುದು ಸ್ಥಳೀಕರು ನಮ್ಮನ್ನು ಓಡಿ ಬಂದವರೆಂದು ಕರೆಯುವ ಬಾಬತ್ತಿಗೆ ಮಾತ್ರ. ಆ ಚರಿತ್ರೆಯು ಸೃಷ್ಟಿಸಿದ ಇಕ್ಕಟಿನ ಕುರಿತಾಗಲ್ಲ.

ಹೀಗಾಗಿ ಇವರಿಗೆ ಮುಜುಗರ. ಇನ್ನು ಮಲೆಯಾಳದ ಸಂಬಂಧದ ಬಗ್ಗೆ ನಾನಾಥರದ ಹೇಳಿಕೆ ಇವೆ. ಅಲ್ಪಸ್ವಲ್ಪ ಉಡುಪು ಹಾಗೂ ಮಾತಿನ ಅಪ್ಪಟ ಕನ್ನಡದಲ್ಲಿ ಕೊಂಚ ಮಲೆಯಾಳದ ರಾಗವು ಬೆರೆತು ಮಲೆಯಾಳ ಸಂಬಂಧದ ವಾಸನೆ ತೂರಿ ಬರುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಇದನ್ನೆ ಕೊಂಚ ಬಿಡಿಸಲು ಕುಳಿತರೆ ತಾವು **"ಬೇಡರ ಕಣ್ಣಪ್ಪನ"** ಒಕ್ಕಲಿನವರು ಎಂದು ಹೇಳಿ ತಾವು ಇಲ್ಲಿನವರೇ ಕನ್ನಡ ನಾಡಿನ ಜೀವ ತಂತುಗಳೆ ಎಂದು ಅಭಿಮಾನದಿಂದ ಹೇಳುತ್ತಾರೆ. 'ಬೇಡರ ಕಣ್ಣಪ್ಪ'ನ ಅಪ್ರತಿಮ ದೈವಭಕ್ತಿ ಮತ್ತು 'ಶಿವ' ನಿಷ್ಟೆಯ ಪರಾಕಾಷ್ಟೆಯ ಕಂಡವರಿಗೆ ಅವರು ಓಡಿಬಂದವರೋ, ಇಲ್ಲಿನವರೋ ಎಂಬ ಮಾತು ಮರೆಯಾಗಿ ನಿಧಾನಕ್ಕೆ ಅವರು ಇಲ್ಲಿ ನೆಲೆಯೂರಿದ ಕಡೆ ಕುತೂಹಲ ಉಂಟಾಗುತ್ತದೆ. ನಮ್ಮ ಕುತೂಹಲಕ್ಕೆ ಗೌರವ ನೀಡಿದಂತೆ ನಾವು **'ಬೇಡರ ಕಣ್ಣಪ್ಪ'**ನ ಒಕ್ಕಲಿಗರು ನಾವು **'ಬೇಡ ಗೌಡ'**ರು ಎಂದು ತಮ್ಮ ಕುಲಗೌರವವನ್ನು ಪ್ರಕಟಿಸುತ್ತಾರೆ. ತಮ್ಮ 'ಓಡಿಗೌಡ'ದ ಬದಲು 'ಬೇಡಗೌಡ'ರೆಂದು ಗುರುತಿಸಿಕೊಳ್ಳುವುದು ಅಭಿಮಾನವೆನಿಸುತ್ತದೆ. ಹೀಗೆ ತಮ್ಮ ಮೂಲದ ಬಗೆಗಿನ ಚರಿತ್ರೆಯನ್ನು ಬಿಡಿಸಿ, ತಾವು ಪ್ರಸ್ತುತ ಇರುವ ಕುಲದ ಬಗ್ಗೆಯೂ ಹೇಳಿ ಈಗ ತಮ್ಮ ಬದುಕು ಬಾಳಾಟದ ಕಡೆಗೆ ಬಂದು ನಿಲ್ಲುವ ಹೊತ್ತಿಗೆ ನಾವು ಆ ಊರಿಗೆ ಬಂದ ಕಾರಣ ಕೇಳಿ ಅವರಿಗೆ ಎಲ್ಲಿಲ್ಲದ ಉತ್ಸಾಹ. ಇಂದಿನ ತಮ್ಮ ಊರು ಹತ್ತು ಹಲವು ಅಭಿವೃದ್ಧಿಗೆ ತೆರೆದುಕೊಳ್ಳುತ್ತಿರುವುದನ್ನು ಒಬ್ಬೊಬ್ಬರಾಗಿ ಹೇಳತೊಡಗುತ್ತಾರೆ. ಅಲ್ಲಿಗೆ ಮಾತು ಚರಿತ್ರೆಯನ್ನು ದಾಟಿಕೊಂಡು ಪ್ರಸ್ತುತಕ್ಕೆ ಬಂದು ನಿಲ್ಲುತ್ತದೆ.

ಗೆಂಡತ್ತೂರು ಹಿಂದೆಯೇ ಪ್ರಸ್ತಾಪಿಸಿದಂತೆ ಒಂದು ಕಾಲಕ್ಕೆ ದಟ್ಟಡವಿಯಾಗಿದ್ದ ಇಂದು ಅಳಿದುಳಿದ ಮರ ಮುಟ್ಟುಗಳ ಮಧ್ಯೆ ಮೂಡಿ ನಿಂತಿರುವ ಊರು. ಒಂದು ಕಾಲಕ್ಕೆ ಅಂದರೆ 'ಮೈರಾಡ' ಸಂಸ್ಥೆಯು ಈ ಊರನ್ನು ತಲುಪುವುದಕ್ಕಿಂತ ಮುಂಚೆ ಸೋಗೆ ಗುಡಿಸಲಿನ ಮನೆಗಳು ಸುತ್ತಲೂ ನೀರು. ಕಬಿನಿ ಹಿನ್ನೀರು. ಮಣ್ಣಿನ ಕಾಲುದಾರಿ.

ರಾತ್ರಿಯಾದರೆ ಮಿಣುಕು ಹುಳುಗಳ ವಿದ್ಯುತ್ ಸಂಚಾರ ಹೀಗೆ ಎಲ್ಲಾ ಊರಿನಂತೆ ಕೆಲವು ಮೂಲಭೂತ ಸೌಕರ್ಯಗಳಿಗಾಗಿ ಸರ್ಕಾರಕ್ಕೆ ಕಾದು ಕುಳಿತಿದ್ದ ಊರು. ನೀರಿನ

ಮಾತಿಗೆ ಬಂದರೆ ಅಲ್ಲಿ ಥರಾವರಿ ಮಾತುಕತೆಗಳನ್ನೇ ಕೇಳಬಹುದು. ಮನೆ, ಜಮೀನು ವಿಚಾರಕ್ಕೆ ಬಂದರೆ ಮತ್ತೊಂದು ಬಗೆಯ ಚಿತ್ರಣ. ಎಷ್ಟಾದರೂ ಪ್ರಕೃತಿಯ ಮಡಿಲಲ್ಲಿ ಅದಕ್ಕೆ ಹೊಂದಿಕೊಂಡು ಅದರಂತೆ ನಡೆದು ಬಾಳುವೆ ನಡೆಸಿದ ಜೀವಗಳು. ಯಾವುದಕ್ಕೂ ಹಿಂಜರಿಕೆ ಇದ್ದಂತಿಲ್ಲ. ಎಲ್ಲದಕ್ಕೂ ಸೈ. ಪ್ರಕೃತಿಯ ಒಡನಾಟಕ್ಕೆ ಬಿದ್ದವರೇ ಹಾಗೇ ಏನೋ ಹೊಸ ಪ್ರಯೋಗಕ್ಕೆ ಥಟಕ್ಕನೇ ತೆರೆದುಕೊಳ್ಳುತ್ತವೆ. ಇಲ್ಲಿಯೂ ಹಾಗೆ ನಡೆದಿದೆ. ಅದು ಛಾವಣಿ ಮಳೆನೀರಿನ ವಿಷಯಕ್ಕೆ ಚೆನ್ನಾಗಿಯೇ ಪ್ರಯೋಗ ನಡೆದಿದೆ.

ಇಡೀ ಊರನ್ನು ಮೈರಾಡ ತೆಗೆದುಕೊಂಡ ಮೇಲೆ ಅನೇಕ ಅಭಿವೃದ್ಧಿಗಳನ್ನು ಮಾಡಿದೆ. ಪವಾಡದಂತೆ ನಾಕಾರು ಕೆಲಸಗಳು ಜರುಗಿವೆ. ಹುಲ್ಲುಹೊದಿಕೆ ಇದ್ದ ಮನೆ ಹೆಂಚಿನ ಮನೆಯಾಗಿದೆ. ಕುಡಿಯಲು ಬೀದಿ ನಲ್ಲಿ ಬಂದಿದೆ. ಬೋರ್‌ವೆಲ್ ಮೂಲಕ ಅಲ್ಲಿಗೆ ನೀರು ನೀಡಿದೆ. ಬೀದಿ ದೀಪಗಳನ್ನು, ಮನೆಗಳಿಗೆ ವಿದ್ಯುತ್ತು ದೀಪ, ಡಾಂಬರ್‌ನಷ್ಟೇ ಸರಾಗವಾಗಿ ಓಡಾಡಲು ಮಣ್ಣಿನ ದಾರಿ. ಪ್ರಾಥಮಿಕ ಶಾಲೆ, ದಿನಕ್ಕೊಂದು ಸರ್ಕಾರಿ ಬಸ್ಸು - ಉಳಿದಂತೆ ಖಾಸಗಿ ಜೀಪುಗಳ ಭರಾಟೆ, ಹೀಗೆ ಒಂದಷ್ಟು ಅನುಕೂಲವನ್ನು ತಾನು ಕಲ್ಪಿಸಿ, ಜಿಲ್ಲಾ ಪಂಚಾಯ್ತಿ ಮೈಸೂರಿನಿಂದ ಒಂದಷ್ಟು ನೆರವು ಊರಿಗೆ ಎಟುಕುವಂತೆ ಮಾಡಿದೆ. ಇಂಥ ಪ್ರಯತ್ನದ ದಾರಿಯಲ್ಲಿ ನಡೆದಿರುವ ಅದ್ಭುತ ಕೆಲಸ ಅಂದರೆ "ಛಾವಣಿ ಮಳೆನೀರಿನ ಸಂಗ್ರಹ." ಇನ್ನೂರು ಮನೆಗಳಿರುವ ಈ ಊರು ಒಟ್ಟಾರೆ ಛಾವಣಿ ಮಳೆ ನೀರಿನ 'ಸಂಗ್ರಹಕ್ಕೆ ಮಾದರಿಯಂತಾಗಿದೆ. ಮೈಸೂರಿನ N.I.E. ಕಾಲೇಜಿನ CART ಸಂಸ್ಥೆ ಮೈರಾಡದ ಜೊತೆ ಸೇರಿ ಹೀಗೊಂದು ಪವಾಡವನ್ನು ಸೃಷ್ಟಿಸಿದೆ. ಎಂಥಾ ನಾಗರೀಕ ಎಚ್ಚರವಿದ್ದವರೂ ಪರ್ಯಾಯ ಸಂಪನ್ಮೂಲ ಕ್ರೂಢೀಕರಣವಾದ ಈ ಸಹಜ ಮಾರ್ಗವನ್ನು ಅಳವಡಿಸಿಕೊಳ್ಳುವ, ಮಾತಿರಲಿ, ಒಪ್ಪುವುದೇ ಕಷ್ಟ.! ಅಂಥಾ ಗಳಿಗೆಯಲ್ಲಿ ಇಡೀ ಊರು ಅದೇನೋ ಛಾವಣಿ ಮಳೆನೀರನ್ನು ಸಂಗ್ರಹಿಸುವ ವಿಧಾನವನ್ನು ಅಳವಡಿಸಿಕೊಂಡಿದೆ. CART ಅಲ್ಲೊಂದು ಧನ್ಯತೆಯ ಗಿಡ ನೆಟ್ಟಿದೆ. ಜಿಲ್ಲಾ ಪಂಚಾಯಿತಿ ಮತ್ತು ಮೈರಾಡ



ಸಂಸ್ಥೆಯು ಒಡಗೂಡಿ ತನ್ನ ಸಾರ್ಥಕತೆಯ ಕಿರೀಟಕ್ಕೊಂದು ಹೊಸ ಗರಿ ಸೇರಿಸಿರುವುದು ಅಭಿಮಾನದ ಸಂಗತಿಯಾಗಿದೆ. ಈ ಯಶೋಗಾಥೆಯ ಪರಿಚಯಕ್ಕೆ ಹೊರಟೇ ಆ ಊರಿನ ಚರಿತ್ರೆಗೊಂದಷ್ಟು ತಿರುಗಿ ಈ ವಿಷಯಕ್ಕೆ ಬಂದಿದ್ದೇನೆ. ಓದುಗರು ಈ ಚರಿತ್ರೆಯನ್ನು ಸೈರಣೆಯಿಂದ ನೋಡಿಕೊಂಡೇ ಮುಂದೆ ಓದಬೇಕೆಂದು ಈ ಲೇಖನ ಬಯಸುತ್ತದೆ. ಈಗ ಮುಂದೆ ಈ ಯಶೋಗಾಥೆಯತ್ತಾ ನಿಮ್ಮನ್ನೊಂದು ಕ್ಷಣ ಕರೆದೊಯ್ಯುವೆ. ಕೇವಲ 15-20 ಮನೆಗಳನ್ನು ತಲುಪಿದರೆ ಆಯಿತು. ಇಡೀ ಊರೇ ಛಾವಣಿ ಮಳೆನೀರಿನ ವ್ಯವಸ್ಥೆಯನ್ನು ರೂಪಿಸಿಕೊಂಡಿರುವ ಮಾದರಿ ಊರೆನಿಸಿಕೊಳ್ಳುತ್ತದೆ. ನಗರದ ಒಳಗೆ ಓಡಾಡಿಕೊಂಡಿರುವ ಜ್ಞಾನ - ವಿಜ್ಞಾನ, ದೃಶ್ಯ - ಶ್ರವ್ಯ ಮಾಧ್ಯಮಗಳು ಈಗ ಈ ಯಶೋಗಾಥೆಯತ್ತ ಧಾವಿಸಿ ಬಂದು ಅದನ್ನು ಜಗಜ್ಜಾಹೀರು ಮಾಡುವುದಷ್ಟೇ ಉಳಿದಿರುವ ಕೆಲಸ. ಶತಮಾನಗಳು ಉರುಳಿದರು ಅಚ್ಚಳಿಯದೆ ನಿಂತ ಆ ಚರಿತ್ರೆಯಿಂದ ಈ ಚರಿತ್ರೆಗೆ ಸರಾಗವಾಗೇ ಇವರು ಜಿಗಿದುಕೊಂಡಿರುವುದು ಅಚ್ಚರಿಯ ಬೆರಗು ಮೂಡಿಸುವ ಸಂಗತಿಯಾಗಿದೆ.

ಇಂಥ ಅಪರೂಪದ ಯಶೋಗಾಥೆ. ಕನ್ನಡದ ನೆಲದಲ್ಲಿ ನಡೆದಿರುವುದು ನಿಜಕ್ಕೂ ಸೋಜಿಗ, ಇದೋ ಆ ಯಶೋಗಾಥೆಯ ಚಿತ್ರಣ. ಈ ಯಶೋಗಾಥೆಯ ದಾಖಲೀಕರಣಕ್ಕೆ ಊರ ಅಂಗಳಕ್ಕೆ ಬಂದು ತಲುಪಿದಾಗ ತಿಟ್ಟನ್ನೇರಿ ಅಡ್ಡೆಯಲ್ಲಿ ನೀರು ತುಂಬಿಕೊಂಡು ಬರುತ್ತಿದ್ದ ಯಜಮಾನರೊಬ್ಬರು ಕಂಡರು. ನಮ್ಮ ಜಾನಪದದಲ್ಲಿ ಇರುವಂತೆ ನೆರೆ ಊರುಗಳಿಂದ ಊರಿಗೆ ಬರುವಾಗ ಎದುರಿಗೆ ಮುತ್ತೈದೆ ಅಥವಾ ನೀರು ತುಂಬಿಕೊಂಡು ಬರುವವರು ಎದುರಾಗಬೇಕಂತೆ. ಆಗ ನಾವು ಹೋದ ಕೆಲಸವೆಲ್ಲ ಹಣ್ಣಾಗುತ್ತದಂತೆ. ನಮಗೂ ಅದೇ ಶುಭ ಸೂಚಕವಾಗಿ ನೀರು ತುಂಬಿಕೊಂಡು ಬರುತ್ತಿದ್ದ ಯಜಮಾನರು ಎದುರಾದರು.

'ಸ್ವಾಮಿ ಊರಾಗೆಲ್ಲ ಛಾವಣಿ ಮಳೆ ನೀರು ವ್ಯವಸ್ಥೆ ಮಾಡಿಕೊಂಡಿದ್ದೀರಂತೆ. ಇದೇನು ಅಡ್ಡೆಯಲ್ಲಿ ನೀರು ಹೊರುತ್ತಿದ್ದೀರಲ್ಲ' ಎಂಬ ನಮ್ಮ ಮಾತಿಗೆ,



'ನಿಜ ಸ್ವಾಮಿ, ಆದರೆ ವರ್ಷಾಪೂರ್ತಿ ದಕ್ಕ ಬೇಕಲ್ಲ. ಬೋರ್‌ವೆಲ್‌ನಲ್ಲಿ ಒಂದಷ್ಟು ಹಿಡಿದುಕೊಂಡು ಬಳಸ್ತೀವಿ. ಆ ನೀರಿನಿಂದ ನಮಗೆ ಉಪಯೋಗ ಬಾಳ ಆಗಿದೆ' ಎಂದು ಮಳೆರಾಯನಿಗೊಂದು 'ಥ್ಯಾಂಕ್ಸ್' ಹಾಕಿ ಮುನ್ನಡೆದರು.

ಅದೇ ದಾರಿಯಲ್ಲಿ ಹೊಟ್ಟೆಯ ಊಟವನ್ನು ತಲೆ ಮೇಲೊತ್ತಿಕೊಂಡು ಸಮೀಪದ ಫ್ಲೋರ್‌ಮಿಲ್‌ಗೆ ನಡೆದಿದ್ದರು. ಈ ಮಹಿಳೆಯರು ಜೊತೆಗೆ ಎರಡು ಎಳೆ ಕಂದಮ್ಮಗಳು. ಮುಖದಲ್ಲಿ, ದೇಹದಲ್ಲಿ ಕೊಂಚವು ದಣಿವಿಲ್ಲ. ನಮ್ಮ ಮಾತು ಕಿವಿಗೆ ಬಿದ್ದುದೆ ತಡ. "ನಾವು ನಮ್ಮ ಮನೆಲಿ ಮಳೆ ನೀರಿನ ತೊಟ್ಟಿ ಮಾಡಿವಿ. ನೋಡ್ಕೊಂಡೋಗಿ" ಎಂದು ತಾಕೀತು ಮಾಡಿದರು. ಅದ್ರಿಂದ ಏನಾದ್ರೂ ಅನುಕೂಲ ಕಂಡಿದ್ಯಾ ಅಂದ್ರೆ. "ಹೂಂ. ಮತ್ತೆ, ಈ ಹೊರೆ ಜೊತೆಗೆ ಆ ಹೊರೆನೂ ನಮ್ಮ ಹೆಗಲಿಗೆ ಬರ್‍ತಿತ್ತು. ಪುಣ್ಯಾತ್ಮರು ಬಂದು ಅನುಕೂಲ ಮಾಡವ್ರೆ. ಈಗ ನಾವು ಅದನ್ನೇ ಬಳಸ್ತಿರೋದು" ಎಂದು ಕಾರ್ಟ್, ಮೈರಾಡ, ಮೈಸೂರು ಜಿಲ್ಲಾ ಪಂಚಾಯಿತಿಯನ್ನು ಹೆಸರಿಸದಂತೆ ಕೃತಜ್ಞತೆಗಳನ್ನು ಸಲ್ಲಿಸಿದರು.





ಇವರು ಅಮಣಮ್ಮ. ಊರಿಗೆ ಮೊದಲ ಛಾವಣಿ ಮಳೆನೀರು ಹಿಡಿದುಕೊಂಡವರು. ಆಕೆಗೆ ಅದೇನೋ ಅಭಿಮಾನ. ಈ ನಗು ಮಳೆ ನೀರು ಬಂದ ಮೇಲೆ ಹೆಚ್ಚಾಗಿದೆ. ಯಾಕೆಂದರೆ ಹೊಳೆ ನೀರು ತರುತ್ತಿದ್ದುದು ಈಕೆಯೆ. ಅದರಲ್ಲಿ ಕಾಯಿಸಿ, ಬೇಯಿಸಿ ಮನೆ ಜನಕ್ಕೆ ನೀಡುತ್ತಿದ್ದುದು ಈಕೆಯೇ. ಮಳೆನೀರು ತನ್ನ ಕೈ ಅಳತೆಗೆ ಬಂದ ಮೇಲೆ ನಿರಾಳ ಅನಿಸಿದೆ. ಛಾವಣಿ ಮಳೆನೀರು ನನ್ನ 'ಶ್ರಮ ಸಂಗಾತಿ' ಎಂಬ ಅಭಿಮಾನ ಇವರದು.



ಅಮ್ಮಣಮ್ಮ ಹೇಳುವಂತೆ "ಆ ಹೊಳೆನೀರು ಕಲಕು ನೀರು, ಗೊಜ್ಜೆ ನೀರು. ಕಾಯಿಲೆ ಕಸಾಲೆ ಬಾಳ ಅನುಭವಿಸಿವಿ. ಈಗ ಈ ನೀರಿಂದ ಒಂದಷ್ಟು ಒಳ್ಳೆದಾಗಿದೆ. ಇದೆಲ್ಲ ನೋಡಿ ಇಲ್ಲಿ ಈ ತೊಟ್ಟಿ ಕಟ್ಟಿ 6 ತಿಂಗಳು ಬರಾಬರಿ ಮಳೆನೀರನ್ನು ಬಳಸ್ತೀವಿ. ಆದರೆ ಎಲ್ಲದಕ್ಕೂ ಇದನ್ನೇ ಅಭ್ಯಾಸ ಮಾಡ್ಕೊಂಡು ಬೇಸಿಗೆ ಕಾಲಕ್ಕೆ ನೀರೇ ಇಲ್ದಂಗಾಗ್ತಿದೆ" ಎಂದು ನಕ್ಕರು.



ಮಲ್ಲೇಗೌಡರ ಪ್ರಕಾರ "ಹಿಂದೆ ಮನೆ ಹೆಂಗಸರೇ ಸ್ವಾಮಿ ನೀರು ತರ್ತಿದ್ದುದು, ಹೊಳೆಯಿಂದ ನೀರೊತ್ತು ಹಣ್ಣಾಗಿದ್ರು ಈಗ ನೋಡಿ ಈ ವ್ಯವಸ್ಥೆ ಬಂದು ಅನುಕೂಲವಾಗಿದೆ. ತಮ್ಮ ಮನೆಯ ಹೆಂಗಸರು ನೀರು ತರುವ ಕಷ್ಟ ಈ ಛಾವಣಿ ಮಳೆನೀರು ಸಂಗ್ರಹದಿಂದ ಒಂದಿಷ್ಟು ಕಮ್ಮಿಯಾಗಿರುವುದು ಅವರ ಅಭಿಮಾನಕ್ಕೆ ಕಾರಣವಾಗಿದೆ.






"ಇದೊ ನೋಡಿ ನಾನು ನೀರು ಹಿಡಿದಿಡೋಕೆ ಮಾಡಿರೋ ವ್ಯವಸ್ಥೆ. ಕನಿಷ್ಟಪಕ್ಷ ನಾಲ್ಕು ತಿಂಗಳಾದರೂ ನಾವು ಬಳಸುತ್ತೇವೆ. ಹೊಳೆ ನೀರಿಗಿಂತ ರುಚಿ. ಅದೇ ಸೋಜಿಗ ಅಲ್ನೋಡಿ ಕಣ್ತುಂಬ ನೀರಿದೆ. ಬಾಯಿಗೆ ಮಾತ್ರ ಇಲ್ಲ" ಎಂದು ದೂರದಲ್ಲಿ ತುಂಬಿ ಮದನಾಡುತ್ತಿದ್ದ ಹೊಳೆಕಡೆ ಕೈ ತೋರಿಸುತ್ತಾ ಆ ಹೊಳೆ ನೀರಿಗೊಂದು ದೂರು ಹಾಕಿ ನಕ್ಕರು. ತಾವು ಕಟ್ಟಿರುವ ನೀರು ಸಂಗ್ರಹಗಾರದ ಬಗ್ಗೆ ಅಭಿಮಾನದ ಮಾತುಗಳನ್ನಾಡಿದರು.



ಜಲಸಂರಕ್ಷಣೆಯ ಕೆಲಸ ಕೈಗೆತ್ತಿಕೊಳ್ಳಲು ಮತ್ತು ಅದನ್ನು ಸಂಗ್ರಹಿಸಲು ಜನ ಮುಂದೇ ಬರುವುದು ತಡ. ಬಂದರೂ ಅವರದೇ ಕಾಲಮಿತಿಯನ್ನು ಹಾಕಿಕೊಂಡು ನಂತರ ಬರುವುದು ವಾಡಿಕೆ. ಆದರೆ ಗೆಂಡತ್ತೂರು ಈ ವಹಿವಾಟಿಗೆ ಥಟಕ್ಕನೆ ದುಮ್ಮಿಕ್ಕಿದ್ದು ಸೋಜಿಗ. ಬಹುಶಃ ಇದಕ್ಕೆ ಕಾರಣ, ಪ್ರಕೃತಿಯೊಂದಿಗಿನ ಸಹಜ ಒಡನಾಟವೂ ಕಾರಣವಾಗಿರಬಹುದು. ಅಂಥದ್ದೊಂದು ಮನೆ ಇದು.





ಮಳೆನೀರು ಸಂಗ್ರಹಕ್ಕೆ ಈ ಊರಿನ ಮನಸ್ಸು ತಕ್ಷಣವೇ ಒಪ್ಪಿಕೊಂಡಿದ್ದು ಆಶ್ಚರ್ಯವಾಗಿಲ್ಲ. ಏಕೆಂದರೆ ಇದಕ್ಕೆ ಹಿಂದಿನಿಂದಲೂ ಮಳೆ ನೀರನ್ನು ಹಿಡಿಯುವ ಕಲೆ ಗೊತ್ತಿತ್ತು. ಅಥವಾ ಅದನ್ನು ಸಂಗ್ರಹಿಸುವ ರೀತಿ ರಿವಾಜು ತಿಳಿದಿತ್ತು. ಈ ಚಿತ್ರ ನೋಡಿ.

ಮನೆಯ ಮುಂದಿನ ಒಸಾರಿನುದ್ದಕ್ಕೂ ಬೊಂಬಿನ ಬಿದಿರಿನ ಓಣಿ ಮಾಡಿ ಅದರ ಮೂಲಕ ಮಳೆನೀರನ್ನು ಹಿಡಿದಿಡುತ್ತಿದ್ದುದಕ್ಕೆ ಸಾಕ್ಷಿಯಾಗಿದೆ. ಆದರೆ ಇದು ಬರಿ ಸಾಕ್ಷಿ! ಬೊಂಬಿನ ಓಣಿಯ ಮೂಲಕ ನೀರು ಹಿಡಿದು ಕುಡಿದ ಜೀವಗಳು ಈಗಿಲ್ಲ. ಆದರೆ ಅದರ ಹೊಸರೂಪದ ಛಾವಣಿ ನೀರು ಸಂಗ್ರಹದ ವ್ಯವಸ್ಥೆ ಅದೇ ಮನೆಯಲ್ಲಿ ಮರುಸ್ಥಾಪನೆಯಾಗಿದೆ.



ಮಳೆನೀರು ಹಿಡಿದಿಡುವ ಕೆಲಸ ಮನೆ ಮನೆಯಲ್ಲೂ ನಡೆಯುತ್ತದೆ. ಆದರೆ ಅದು ದಿನಾಲು ಕಣ್ಣಿಗೆ ಬೀಳಬಾರದೆ!. ದಾರಿಗುಂಟ ನೆರೆಹೊರೆಯ ಊರಿನ ಜನ ಓಡಾಡಿದಾಗ ಅವರಿಗೆ ಈ ವಿಚಾರ ತಲುಪಬಾರದೆ? ಅವರಿಗೂ ಪ್ರೇರಣೆ ಒದಗಬಾರದೆ? ಅದಕ್ಕೆ ಮೈರಾಡ/ ಕಾರ್ಟ್/ ಮೈಸೂರು ಜಿಲ್ಲಾ ಪಂಚಾಯ್ತಿಯವರ ಪ್ರಚಾರದ ಒಂದು ನೋಟ ಇದು. ಇದರಲ್ಲಿ ಮಳೆನೀರಿನ ಸಂಗ್ರಹದಿಂದ ಆಗುವ ಉಪಯೋಗ ಕುರಿತು ಸರಳವಾಗಿ ವಿವರಿಸುತ್ತಿರುವ ಗೋಡೆ ಬರಹದ ನೋಟವಿದು.




ಬರೀ ಮನೆ ಮುಂದಲ ಜಾಗದಲ್ಲಿ ಮಾತ್ರ ಪ್ರಚಾರವಲ್ಲ. ಊರಿನ ಮುಖ್ಯರಸ್ತೆಯಲ್ಲಿರುವ ಬಸ್ ಸ್ಟ್ಯಾಂಡ್ ಗೋಡೆ ಏಕೆ ಖಾಲಿ ಇರಬೇಕು? ಅಲ್ಲೂ ಮಳೆ ನೀರು ಬಳಕೆ ಕುರಿತ ಮಾಹಿತಿ ಇರಬೇಡವೆ? ಈ ಗೋಡೆ ನೋಡಿ 'ಮಳೆ' ನೀರನ್ನು ಶೇಖರಿಸಿ ಬಳಸಿ ಉಪಯೋಗಿಸಿಕೊಳ್ಳಿ' ಎಂದು ಎಡಬಿಡದೆ ಹೇಳುವಂತಿದೆ.




ಈ ಮನೆ ನೋಡಿ. ಈ ಹೆಣ್ಣು ಮಗಳು ತಾನು ಜಮಾವಣೆ ಮಾಡಿ ಹಿಡಿದಿಟ್ಟ ನೀರನ್ನು ಅಭಿಮಾನದಿಂದ ತೋರಿಸಲು ನಿಂತಿದ್ದಾಳೆ. ಅದಕ್ಕೆ ದನಿಗೂಡಿಸಿ ನಮ್ಮ ಮನೆಗೂ ಬನ್ನಿ. ನಾವು ಮಳೆನೀರನ್ನು ಹಿಡಿದಿಟ್ಟಿವಿ ಎಂದು ಕರೆಯುವ ನೆರೆಹೊರೆಯ ನೀರೆಯರು ಜೊತೆಗಿದ್ದಾರೆ.



ಈ ಕೂಸುಗಳಿಗೀಗ ಒಂದು ಅಂದಾಜಿರಬೇಕು. ತನ್ನ ಅವ್ವ ಹಿಡಿದಿಟ್ಟ ಮಳೆನೀರು ಕುರಿತು ಮಾತಾಡಲು ಬಂದಿದ್ದಾರೆ ಅಂತ. ಅದಕ್ಕೆ ತಾವು ಒಂದು ತೊದಲು ನುಡಿ ಹಾಡಲು ಕಾದು ಕುಳಿತಂತೆ ಆ ಸೂರಿನಡಿಯೇ ಕುಳಿತಿವೆ.



ಈ ಪೋರಿ ನೋಡಿ. ತನ್ನ ಮನೆಯಲ್ಲಿ ಭಾವಣಿ ಮಳೆ ನೀರಿದೆ. ಬೋರ್‌ವೆಲ್ ನೀರೂ ಬರುತ್ತಿದೆ. ಆದರೂ ತನಗೂ ನೀರು ಉಸಬಾರಿ ತೋರಿಸುವ 'ಉಮೇದು' ಕಾಡಿರಬೇಕು. ತನ್ನ ಕೈಲಾದ ಪಾತ್ರೆ ಹೊತ್ತು ಹೊರಟೇ ಬಿಟ್ಟಳು. ಹೊಳೆ ನೀರಿಗೆ ಹೊರಟವಳಂತೆ. ನಮ್ಮನ್ನು ತಿರುಗಿ ನೋಡಿದರೆ ಬಟ್ಟಲುಗಣ್ಣು ಬಿಟ್ಟು ಒಂದು ದೂರು ಹೇಳುತ್ತಿದ್ದಳೇನೋ "ಭಾವಣಿ ಮಳೆನೀರು ತುಂಬಾ ಸಿಹಿ ಅದನ್ನು ಕುಡಿದು ಮುಗಿಸಿಬಿಟ್ಟಿದ್ದೀನಿ. ಅದಕ್ಕೆ ಅಮ್ಮ ಬೋರ್‌ವೆಲ್ ನೀರಿಗೆ ಕಳುಹಿಸಿದ್ದಾರೆ" ಅಂತ.



ಈ ಪುಟ್ಟ ಪೋರಿ ಹಾಗಲ್ಲ! ಶಾಲೆಯಲ್ಲಿ ನೋಡಿದ್ದಳು. ಮಳೆನೀರು ಸಂಗ್ರಹಗಾರ ಕಂಡಿದ್ದಳು. ಅಲ್ಲಿ ಮಧ್ಯಾಹ್ನದ ಊಟ ಮಾಡಿದಾಗ ಅದೇ ನೀರನ್ನು ಕುಡಿದಿದ್ದಳು. ಮನೆಗೆ

ಬರುವ ದಾರಿಯಲ್ಲಿ ಈ ನಲ್ಲಿ ಕಂಡಿದೆ. "ಅದೇ ನೀರು ಇಲ್ಲೂ ಬರಬಹುದು. ಇರಲಿ ಇಲ್ಲಿ ಒಂದು ಗುಟುಕು ಕುಡಿಯೋಣ" ಅಂತ ಈ ನಲ್ಲಿಗೆ ಬಾಯಿಟ್ಟಿರಬಹುದೇ ಆದರೆ ಅದು ಬೋರ್‌ವೆಲ್ ಲೈನ್ ಅಂತ ಮೇಡಂ ಹೇಳೇ ಇಲ್ವಲ್ಲಾ! ಅನ್ನೋ ಗುಮಾನಿ ಅವಳದಲ್ಲ!



ಇದೋ ನೋಡಿ ಆ ಪುಟ್ಟ ಪೋರಿಯರು ಓದುತ್ತಿರುವ ಶಾಲೆ. ಮನೆಗಾಯಿತು. ಬಸ್‌ಸ್ಟ್ಯಾಂಡ್‌ಗಾಯಿತು. ಶಾಲೆಗೆ ಬೇಡವೇ. ಅಲ್ಲೂ ಈ ಮಳೆ ನೀರು ಸಂಗ್ರಹ ವ್ಯವಸ್ಥೆ ಅಚ್ಚುಕಟ್ಟಾಗಿ ಮೂಡಿದೆ. ಇದು ಆ ಚಿತ್ರ: ಅಲ್ಲಿನ ಗುರು ವೃಂದ ಈ ಮಳೆ ಸಂಗ್ರಹಾಗಾರದ ಉಪಯುಕ್ತತೆ ಕುರಿತು ಹೇಳಿದ್ದು ಹೀಗೆ:

ನಿಜಕ್ಕೂ ಇದೊಂದು ಸಾರ್ಥಕ ಯತ್ನ

ನಮ್ಮ ಮಕ್ಕಳಿಗೆ ಹೊಸದೊಂದು ಪರಿಕಲ್ಪನೆಯ ಬೀಜವನ್ನು ಬಾಲ್ಯದಲ್ಲೇ ನೆಟ್ಟಂತೆ ಈ ಪ್ರಯತ್ನ ನಮಗೆ ತೋರಿದೆ.

ಮಧ್ಯಾಹ್ನದ ಮಕ್ಕಳ ಊಟ ಯೋಜನೆಗೆ ಇದು ಆಧುನಿಕ ಭಗಿರಥನಿಂದ ಬಂದ ಕೊಡುಗೆ ಎನಿಸಿದೆ.

ನಾವು ಮತ್ತು ನಮ್ಮ ಮಕ್ಕಳು ಇದರಲ್ಲೇ ಅಡುಗೆ ಮಾಡಿದ್ದನ್ನು ಊಟ ಮಾಡುತ್ತೇವೆ. ಕುಡಿಯುತ್ತೇವೆ.

ಅಡಿಗೆಯವರ ಪ್ರಕಾರ ಬೇಳೆ ಬೇಗ ಬೇಯುತ್ತೆ ಅಷ್ಟರಮಟ್ಟಿಗೆ ಅಡಿಗೆಯವರ ಕೈಯಲ್ಲೂ ಈ ಪ್ರಯತ್ನ ಸೈ ಅನಿಸಿಕೊಂಡಿದೆ.



ಈ ಪುಟ್ಟ ಮಗುವನ್ನು ನೋಡಿ. ನಾವು ಕೇಳಿದ್ದು ಇವಳ ಅಮ್ಮನನ್ನು. ನೀವ್ಯಾಕೆ ಛಾವಣಿ ಮಳೆನೀರನ್ನು ಪಡೆದಿಲ್ಲ' ಅಂತ. ಆದರೆ ಇವಳಿಗೆ ಬಲು ನಾಚಿಕೆ ಆಗೋಯ್ತು. ಉಳಿದ ಬಾಕಿ ಮನೆಯ ಪೈಕಿ ಇವರದು ಇರಬೇಕು. ನಾವಂತೂ ಇವಳ ನಾಚಿಕೆಗೆ ಕಾರಣವನ್ನು CARTನವರಿಗೂ, ಮೈರಾಡದವರಿಗೂ ಹೇಳಿದೆವು. ಅವರು ಮುಂದಿನ ಸಲ ಇವಳ ಮನೆಗೂ ಈ ವ್ಯವಸ್ಥೆ ಮಾಡುತ್ತೇವೆ ಎಂದು ಮಾತು ಕೊಟ್ಟರು. ಇನ್ನು ಅವಳಿಗೆ ಈ ವಿಚಾರ ತಿಳಿಸಬೇಕು. ಅವಳ ಸಂಕೋಚ ಬಿಡಿಸಬೇಕು ಅಷ್ಟೆ!



ಇದು ಇಡೀ ಊರಲ್ಲೇ ವಿಶೇಷವಾಗಿ ನಿರ್ಮಿಸಿರುವ ಛಾವಣಿ ಮಳೆ ನೀರು ಸಂಗ್ರಹಗಾರ ತಾಂತ್ರಿಕವಾಗಿ ಇದನ್ನು 'ಸಿಲಿಂಡ್ರಿಕಲ್ ಟ್ಯಾಂಕ್' ಅಂತ ಕರೆಯುವರು. ಮನೆ ಕೊಂಚ

ದೊಡ್ಡದು. ಸರಿಯಾಗಿ ಹೇಳಬೇಕೆಂದರೆ 15-20 ಜನ ಕುಡಿಯುವಷ್ಟು ಒಂದೇ ಮಳೆಗೆ ನೀರು ಸಂಗ್ರಹಿಸಬಹುದು. ಈ ಮನೆ ಒಡತಿ ಹೇಳುವುದು ಹೀಗೆ

"ಮೊದಮೊದಲು ಈ ನೀರು ಕುಡಿಯಲು ಕಷ್ಟ ಆಗಿತ್ತು. ಬರ್ತಾ ಬರ್ತಾ ನಮ್ಮ ಹೊಳೆಗಿಂತ ಸಾವಿರ ಪಾಲು ವಾಸಿ ಅನಿಸಿತು.

ಕಾಳು - ಅಕ್ಕಿ ಚೆನ್ನಾಗಿ ಬೇಯ್ತದೆ. ಕಾಫಿ, ಟೀಗೂ ಅನುಕೂಲ

ಎಲ್ರೂ ಇದೆ ಚನ್ನಾಗಿದೆ ಅಂತ ಕುಡಿದು ಬಿಡ್ತಾರೆ. ಬೇಸಿಗೆ ಕಾಲಕ್ಕೊಂದಷ್ಟಿರಲಿ ಅಂದ್ರೆ ಯಾರು ಕೇಳದೇ ಇಲ್ಲ ನೋಡಿ.

ಸ್ನಾನಕ್ಕೆ ಇದನ್ನ ಬಳಸಿಬಿಡ್ತಾರೆ ಹಿಂಗಾಗಿ ಈ ಸಲ ನೀರು ಬೇಸಿಗೆ ಮುನ್ನ ತೀರೋಗಿದೆ.


ಸ್ನಾನಕ್ಕೆ ಬಳಸಿದರೆ ತಲೆಗೂದಲು ಮೃದುವಾಗುತ್ತೆ ಅದಕ್ಕೆ ಸ್ನಾನಕ್ಕೆ ಬಳಸಿಬಿಡ್ತಿದ್ದೀವಿ.



ಮನೆ ಪುಟ್ಟದಾದರೇನು. ಮುಂದಕ್ಕೆ ಇಳಿಜಾರು ಜಾಗ ಖಾಲಿ ಇತ್ತು. ಅದಕ್ಕೆ ಹಿಂಭಾಗದಲ್ಲಿ ವಿಶಾಲವಾಗಿ ಛಾವಣಿ ಇಳಿಸಿದೆ. ಟ್ಯಾಂಕ್ ಕಟ್ಟೋಕೆ ವಿಶಾಲವಾಗಿ ಜಾಗವಿತ್ತು ಹೀಗಾಗಿ ಮನೆ ಹಿಂಭಾಗದಲ್ಲಿ ಶೇಖರಣೆ ಮಾಡ್ತಾದ್ದೀವಿ. ಇದು ಕೇರಿಯ ಮತ್ತೊಂದು ಛಾವಣಿ ಮಳೆನೀರಿನ ಮನೆಯ ಒಡೆಯನ ಮಾತು. ದೂರದಲ್ಲಿ ನಿಂತು ತೋರಿಸಿದರು.



"ಇದೋ ನೋಡಿ ನಮ್ಮ ಮನೆ ವಿಶಾಲವಾಗಿದೆ. ಒಂದು ಮಳೆಗೆ ಸಾವಿರಾರು ಲೀಟರು ಹಿಡಿದು ತುಂಬಿಕೊಂಡಿದ್ದೇವೆ. ನಮ್ಮ ಮನೇಲಿ ಅಷ್ಟೆ ಮೊದ ಮೊದಲು ನಮ್ಮಪ್ಪ ಒಪ್ಪಿರಲಿಲ್ಲ. ನಾವು ಜಮೀನಲ್ಲಿ ಬಾವಿ ತೆಗಿಸುತ್ತಿದ್ದೆವು. ಅಲ್ಲಿ ಅಳಿದುಳಿದ ರಿಂಗ್ ಬಳೆಗಳು ಅಲ್ಲಲ್ಲೆ ಬಿದ್ದಿದ್ದವು. ಕಾರ್ಟ್‌ನ ರವಿ ಸಾರ್ ಇವು ಕಣ್ಣಿಗೆ ಬಿದ್ದದೆ ತಡ 'ಅದನ್ನೇ ಒಂದರ ಮೇಲೊಂದು ಸೇರಿಸಿ ಟ್ಯಾಂಕ್ ಮಾಡಿ' ಅಂದು ಬಿಟ್ರು. ನಾವು ಬುದ್ಧಿ ಖರ್ಚು ಮಾಡಿ ಅವರು ಹೇಳಿಕೊಟ್ಟಂತೆ ಮಾಡಿದೋ ನೋಡಿ ನಮ್ಮನೆಗೂ ಒಂದು ಟ್ಯಾಂಕ್ ಆಯ್ತು" ಸದ್ಯ ಒಳ್ಳೆ ಐಡಿಯಾ ಹೇಳಿಕೊಟ್ರು. ಕಾರ್ಟ್ ರವಿಯವರು ಕೈ ಜೋಡಿಸಿದರು. ಇಲ್ಲದೇ ಇದ್ದರೆ ನಾವು ಇನ್ನೊಂದೆರಡು ಮಳೆಕಾಲ ಕಳೆಯಬೇಕಾಗಿತ್ತು. ಇದೋ ನೋಡಿ ನಮ್ಮ ಟ್ಯಾಂಕ್" ಅಂತ ಈ ಹೆಣ್ಣು ಮಗಳು ತಮ್ಮ ಮನೆಯ ಭಾವಣಿ ಕಥೆಯನ್ನು ಸೇರಿಸಿದಳು.





ಇದು ಸ್ವಲ್ಪ ಗರೀಬರ ಮನೆ "ಅಂಗಂತಾ ಸುಮ್ಮನೇ ಇರೋಕ್ಕಾಗುತ್ತಾ. ಊರೆಲ್ಲ ಮಳೆನೀರು ಹಿಡಿಯೋಕೆ ಓಡಾಡ್ತಿದ್ರೆ ನಮ್ಮ ಮನೆ ಅಂಗದೆ, ಹಿಂಗದೆ ಅಂತ ಕೂರೊಕ್ಕೆ ಸಾಧ್ಯನಾ? ಮನೆ ಹಿಂದೆ ತಿಪ್ಪೆ ಗುಂಡಿ ಇತ್ತು. ಅದನ್ನು ತೆಗೆದು ಚೊಕ್ಕಟ ಮಾಡಿದೆವು. ಸುತ್ತಾ ಒಂದಷ್ಟು ಶುಚಿ ಮಾಡಿದೆವು. ನಮ್ಮ ಮನೆ ಅಳತೆಗೆ ಒಂದಷ್ಟು ಎಟುಕುವಂತೆ. ಇದೇ ನಾವು ಮಾಡಿಕೊಂಡ ಛಾವಣಿ ಮಳೆ ನೀರಿನ ವ್ಯವಸ್ಥೆ" ಅಂತ ಈ ಮನೆಯ ಜನ ಹೇಳಿದರು.



ಇಷ್ಟು ನಿರಾಳವಾಗಿ ನನ್ನ ಕೂಸನ್ನ ಎತ್ತಿಕೊಂಡು ನಾನು ನಿಂತ ದಿನವೇ ಇರ್ಲಿಲ್ಲ. ನಾನು ನೀರು ತರಬೇಕು ಅಷ್ಟೊತ್ತಿಗೆ ಯಜಮಾನ್ರು ಊರು ಕಟ್ಟೆಗೋ ಜಮೀನಿಗೋ ನಡೆದುಬಿಡೋರು. ಈ ಹಸುಗೂಸು ರಾಗಪಾಡೋಕೆ ಶುರುಮಾಡೋದು. ನೀರು ತರೋದು ಹೇಗೆ? ಇದೂ ಹೆಗಲಿಗೆ ಕಟ್ಟಿಕೊಂಡು ಹೊಳೆಗೆ ಹೋಗೋ ಕಥೆ ನೆನೆದುಕೊಳ್ಳಿ. ಈ ವ್ಯವಸ್ಥೆ ನಮ್ಮ ಮನೆಗೆ ಬಂದು ನನಗೂ ಅನುಕೂಲ. ನನ್ನ ಹಸುಗೂಸಿಗೂ ಅನುಕೂಲ. ಇದು ಈ ಮಹಿಳೆಯ ವ್ಯಾಖ್ಯಾನ.



ಈ ಮನೆ ನೋಡಿ. ಬಹಳ ಜಾಣರು ಇವರು. ಅಚ್ಚುಕಟ್ಟಾಗಿ ನೀರು ತುಂಬಿ ಕೂಡಿಟ್ಟಿದ್ದಾರೆ. ನಿಶ್ಚಿಂತೆ ಇಂದು ಹೊಲಮನೆ ಕೆಲಸಕ್ಕೆ ಹೋಗಿದ್ದಾರೆ. ಸಂಜೆ ಬಂದರೆ ಚಿಂತೆ ಇಲ್ಲ. ಬೋರ್‌ವೆಲ್‌ನಲ್ಲಿ ಬಂದರೆ ಸೈ. ಇಲ್ಲದಿದ್ದರೆ ಕೂಡಿಟ್ಟ ನೀರಿಂದ ಎರಡು ಕೊಡ ತೆಗೆದುಕೊಳ್ಳುವುದು ಅಡಿಗೆಗೆ ಬಳಸುವುದು ಒಟ್ನಲ್ಲಿ ನೀರಿಗೆ ಹೆಂಗಪ್ಪ ಅಂತ ಚಿಂತಿಸಬೇಕಿಲ್ಲ ಇದು ಈ ಮನೆಯವರ ಮಾತು.



ಬನ್ನಿ ಸ್ವಾಮಿ ಊರೆಲ್ಲಾ ತಿರುಗಿದ್ದೀರಾ. ಒಂದೊಂದು ಮನೆನೂ ನೋಡಿ ಬಂದಿದ್ದೀರಾ. ನೋಡಿದ್ರಾ ನಮ್ಮೂರಾ ಜನಾನ! ಒಳ್ಳೇದು ಅಂದ್ರೆ ಮುಂದು ನಿಂತು ಒಪ್ಪಿ ಮಾಡುತ್ತಾರೆ. ಮನಸ್ಸಿಗೆ ತಗೋತ್ತಾರೆ. ಸಮಾಧಾನ ಆಯ್ತು. ಇಂಥ ಊರಿನಂತೆ ನೆರೆಹೊರೆಯಲ್ಲಿ ಎಲ್ಲಾದ್ರೂ ಕಂಡಿದ್ದೀರಾ? ನೀವು ಕರ್ಕೊಂಡು ಬಂದು ತೋರ್ಸಿ. ನಾವು ಹಿಂದೆ ನೀರಿಗೆ ಪಟ್ಟಪಾಡನ್ನು ಅವರಿಗೂ ತಿಳಿಸ್ತೀವಿ. ನೀರಿನ ವಿಚಾರದಲ್ಲಿ ನೆಮ್ಮದಿಯಾಗಿ ಇರೋ ಕಲೇನಾ ತಿಳಿಸ್ತೀವಿ. ಅಂದ ಹಾಗೆ ತಗೊಳ್ಳಿ ದಣಿದಿದ್ದೀರಾ ಒಂದು ಲೋಟ ಮಳೆ ನೀರು ಕುಡಿರಿ" ಈ ಮನೆ ಒಡತಿ ಅಮ್ಮಯಮ್ಮ ಹೇಳಿದ್ದು ಹೀಗೆ.




ಅಮ್ಮಯಮ್ಮನ ಮನೆಯ ಪಕ್ಕದಲ್ಲಿ ಕಟ್ಟಿರುವ ನೀರು ಸಂಗ್ರಾಹಗಾರದ ಚಿತ್ರ



"ನಡಿಯೇ ಹೋಗೋಣ. ಚನ್ನಾಗಿದೆ ಅಂತ ಹಿಡಿದಿರೋ ಮಳೆ ನೀರನೆಲ್ಲಾ ಎಲ್ರೂ ಕುಡಿದು ಬಿಟ್ಟಿದ್ದೀವಿ. ಬೋರ್‌ವೆಲ್‌ನಲ್ಲಿ ಒಂದಷ್ಟು ನೀರು ತರೋಣ" ಅಂತ ಗೆಳತಿಯರಿಬ್ಬರೂ ನೀರು ತರಲು ಬಂದಿರಬಹುದೇ? ಹೌದು. ಕೂಡಿಟ್ಟ ನೀರನ್ನು ಬಳಸುವಲ್ಲಿ ಕೊಂಚ ಏರುಪೇರಾಗಿದೆ. ಬೇಸಿಗೆವರೆಗೂ ಹಿತಮಿತವಾಗಿ ಬಳಸಿಕೊಂಡು ಅಥವ ನೀರಿಗೆ ತತ್ವಾರ ಬಂದಾಗ ಇದನ್ನು ಬಳಸಿಕೊಳ್ಳಬೇಕೆಂಬ ತಿಳುವಳಿಕೆ ಕೊರತೆ ಇದೆ.

ಈಗಾದರೆ ಕೂಡಿಡುವ ಮಳೆ ನೀರು ಕಷ್ಟಕಾಲಕ್ಕೆ ಎಂಬುದು ಲೆಕ್ಕ ತಪ್ಪುತ್ತೆ. ಮತ್ತದೆ ಬವಣೆ ಎದುರಿಸಬೇಕಾಗುತ್ತೆ. ಈ ಬಗ್ಗೆ ಒಂದಷ್ಟು ತಿಳುವಳಿಕೆಯ ಮಾತುಕತೆಯನ್ನು ಹೆಚ್ಚು ನಡೆಸಬೇಕು.........







ಈ ತಿಳುವಳಿಕೆಯ ಬಗ್ಗೆ ಕೊರತೆಯಾದರೆ ಮತ್ತೆ ಈ ಪುಟ್ಟಪೋರಿ ಮತ್ತು ಮಕ್ಕಳು ನೀರಿಗಾಗಿ ಕಾಯಬೇಕಾಗುವುದು. ಇವರು ಮತ್ತೆ ಹೊಳೆ ಕಡೆ ಪಾತ್ರೆ ಹಿಡಿದು ಹೊರಟು ಬಿಡಬಹುದು. ಹಾಗಾಗಬಾರದಲ್ಲ! ಈ ಹೊರೆಯೊಂದಿಗೆ ಆ ಹೊರೆಯು ಕಾದಿರಬಾರದಲ್ಲ!.

ನೀರು ಕೊಟ್ಟವರು ತಿಳುವಳಿಕೆಗೂ ಒಂದಷ್ಟು ಸಮಯ ಕೊಡಬೇಕು. ನೀರು ಕೊಟ್ಟ ಪುಣ್ಯ ಶಾಶ್ವತವಾಗಿ ಉಳಿಯಲಿ..... ಹರಿಯಲಿ..............

ಈ ಯಶೋಗಾಥೆಯು ನಮ್ಮ ನೆರೆಹೊರೆಗೆ ಎಷ್ಟು ಮುಟ್ಟಿತೋ, ಮುಟ್ಟಿದೆಯೋ ನಾ ಕಾಣೆ ಆದರೆ ಬಲುದೂರದ, ಬಹುದೂರದ "ಸಿಂಗಪುರ"ದ ಒಂದು ಅಧ್ಯಯನ ತಂಡಕ್ಕೆ ಈ ಊರು ವಸ್ತು. ಈ ಊರಿನ ಮಳೆ ನೀರಿನ ಕಥೆ ಮುಟ್ಟಿ ಬಿಟ್ಟಿದೆ. ಒಂದು ಬೆಳಿಗ್ಗೆ ಅವರು ಕಾರ್ಟ್‌ನ ಗುರುತು ಹಿಡಿದು ಅವರ ಕೈಹಿಡಿದುಕೊಂಡು ಗೆಂಡತ್ತೂರಿಗೆ ನಡೆದುಬಂದು ಬಿಟ್ಟಿದೆ. ಮೈರಾಡ ಮತ್ತು ಜಿಲ್ಲಾ ಪಂಚಾಯಿತಿ ಅವರೊಂದಿಗೆ ಸಾಥ್ ನೀಡಿ ತಾನು ಬಂದುಬಿಟ್ಟಿದೆ. ಭಾಷೆಯ ಹಂಗಿಲ್ಲ. ವೇಷಭೂಷಣಗಳ ತಾರತಮ್ಯವಿಲ್ಲ. ಎಲ್ಲರಿಗೂ ನೀರೇ ಕೇಂದ್ರ. ಸಿಂಗಪುರ ಮತ್ತು ಗೆಂಡತ್ತೂರು ಸಮಾಗಮವಾಗಿದ್ದು ಹೀಗೆ ನೀರನ್ನು ಕೇಂದ್ರವಾಗಿಟ್ಟುಕೊಂಡು ಅಷ್ಟೂ ದೂರದಿಂದ ಬಂದ ಈ ಅಧ್ಯಯನ ತಂಡಕ್ಕೆ ಸಂಭ್ರಮವೋ ಸಂಭ್ರಮ!. ಒಬ್ಬರ ಕನಸು ಮತ್ತೊಬ್ಬರಲ್ಲಿ ಸಾಕಾರಗೊಳ್ಳುವ ಅವಕಾಶ ಇದಕ್ಕಿಂತ ಇನ್ನೇನು ಬೇಕು.

ಈ ಸಿಂಗಪುರದವರೇ ಹಾಗೇ. ತಾವು ಅಚ್ಚುಕಟ್ಟಿನ ಆಕರ್ಷಣೀಯ ಉತ್ತುಂಗಕ್ಕೆ ಹೋಗಿಬಿಡುತ್ತಾರೆ. ತಮ್ಮಂತೆ ಇವರೂ ಆಗಬೇಕೆಂಬ ಬಯಕೆಯಲ್ಲಿ ಹೋದ ಕಡೆಯಲ್ಲೆಲ್ಲಭವಿಷ್ಯಕ್ಕೆ ಒಂದು ಬೀಜ ನೆಡುತ್ತಾರೆ. ಬಾಂದವ್ಯಕ್ಕೆ ಕಾರಣವಾಗಿ ಬಿಡಬಹುದಾದ ಒಂದು ಅದ್ಭುತವನ್ನು ಸಿಂಗಪುರದ ಈ ಅಧ್ಯಯನ ತಂಡ ಈ ಊರಲ್ಲೂ ಮಾಡಿದೆ. ಈ ಕುರಿತು ಒಂದೆರಡು ಸಂಗತಿಗಳು.



ಗೆಂಡೆತ್ತೂರು ಮಳೆನೀರು ಹಿಡಿದಿಟ್ಟಿರುವ ಮಾತು ಕೇಳಿ ಸಿಂಗಪುರದ ತಂಡ ಈ ಊರಿಗೆ ಬಂತು. ಭಾಷೆಯ ಹಂಗು ಮೀರಿ ಬೆರೆತರು. ಅವರು ಬಾಯಿ ಬಿಟ್ಟೊಡನೆ ಇವರ ಭಾವನೆ ಗರಿಗೆದರಿತು. ಇವರ ಕಂಠ ಕೇಳಿದೊಡನೆ ಅವರ ನಗು ಚಿಮ್ಮಿತು. ಆಂಗಿಕ ಚಲನೆಗಳು ಬೇಕು ಬೇಡಗಳು ತೋರುತ್ತಿದ್ದವು. ಇಂಥ ಕಾಡು ಹುಡುಕಿ ಬಂದರಲ್ಲ, ಇರವವರಿಗೆ ನೆಲೆ ನಿಲ್ಲಲು ನಾನಾ ಪಾಡು. ಜನ ಬೆದರಿ ನೋಡಿತು. ಬೆಚ್ಚಿದ್ದನ್ನು ನೋಡಿ ಇನ್ನೊಬ್ಬರಿಗೆ ಬೆರಗು. ಮತ್ತೊಬ್ಬರಿಗೆ ನಗುವೇ ಭಾಷೆಯಾಗಿದೆ. ಇದೇನು ಸೋಜಿಗವೋ ಎಂದು ನೀರೆಯರು ಬೆರಗುಗಣ್ಣಾಗಿ ನಿಂತರು. ನೋಡಿದರು. ಇವರಿಗೆ ಅವರೇನು ಮಾಡುವರು ಎಂಬ ಕುತೂಹಲ. ಅವರಿಗೆ ಇವರು ಹಿಡಿದಿರುವ ಕೊಡಕ್ಕೆ ನಾಳೆ ನೀರು ತುಂಬಿಕೊಡುವ ತವಕ. ಇಬ್ಬರಿಗೂ ಗೊತ್ತಿಲ್ಲ. ಇಬ್ಬರಿಗೂ ಗೊತ್ತಿದೆ. ಖಾಲಿ ಕೊಡ, ಪಾತ್ರೆ ಪಗಡ ಹಿಡಿದು ಅವರನ್ನು ಹೀಗೆ ನೋಡಿದರು.





ಗೆಂಡತ್ತೂರನ್ನು ಪರಿಚಯಿಸಲು ನಮ್ಮೊಂದಿಗೆ ಬಂದಿದ್ದ CART ಗಿರೀಶ್ ಹೇಳಿದ್ದು ಹೀಗೆ "ಸ್ಥಳೀಕರು ಕೆಲಸ ಮಾಡಿದಾಗ ಇವರು ಸಿಂಗಪುರಿಗರು ಇಟ್ಟಿಗೆ ಕೊಟ್ಟರು, ಮಣ್ಣು ಎತ್ತಿ ಕೊಟ್ಟರು. ತಾವು ಬಂದ ಹೆಗ್ಗುರುತಾಗಿ ಒಂದೆರಡು ಮನೆಗೆ ಮಳೆ ನೀರು ಸಂಗ್ರಹಾಗಾರವೊಂದನ್ನು ಕಟ್ಟತೊಡಗಿದರು. ಒಂದು ಇದ್ದದ್ದು ಎರಡಾಯಿತು. ಮೂರಾಯಿತು. ನೆರೆಹೊರೆಯವರೆ ಕಾಣದ ಪವಾಡ, ಈ ಆಶ್ಚರ್ಯ ತಂಡದಿಂದ ನಡೆಯಿತು".

ಇದ್ದ ಅಷ್ಟೂ ದಿನವೂ ನೀರು ಸಂಗ್ರಹಗಾರದ ತೊಟ್ಟಿಗಳನ್ನು ಕಟ್ಟುವುದ ಕಲಿತರು. ಕಟ್ಟಿದರು. ಸಂಭ್ರಮಿಸಿದರು. ಎಲ್ಲಕ್ಕೂ ಮಿಗಿಲಾದ, ಮರೆಯಲಾಗದ ಸಂಗತಿ ಎಂದರೆ, ಸಿಂಗಪುರದ ಆ ತಂಡ ಪ್ರತಿಯೊಬ್ಬರ ಮನೆಯಲ್ಲಿ ಎರಡೆರಡು ಜನದಂತೆ ಅಷ್ಟು ದಿನವೂ ಉಳಿದುಕೊಂಡಿತು. ಊಟ ಮಾಡಿತು. ಕಥೆ ಹೇಳಿತು. ಕಥೆ ಕೇಳಿತು. ಸ್ಥಳೀಯರ ಉಡಿಗೆ ಧರಿಸಿದರು. ಹೆಣ್ಣು ಮಕ್ಕಳು ಸೀರೆಯುಟ್ಟು, ಕುಂಕುಮ ಧರಿಸಿ, ಬಳೆ ತೊಟ್ಟು ನಲಿದಾಡಿದರು. ಗೆಂಡತ್ತೂರಿನ ಒಕ್ಕಲಾದರು. ಬೇಡ ಗೌಡನ ಕೂಟವಾದರು. ಬೇಡರ ಕಣ್ಣಪ್ಪನಿಗೆ ಕೈ ಜೋಡಿಸಿದರು. ನೀರಿಗಾಗಿ, ನೀರಿನ ಹುಡುಕಾಟಕ್ಕೆ, ನೀರಿನ ವಹಿವಾಟಿನ ತಿಳುವಳಿಕೆಯ ಗಳಿಕೆಗೆ ಬಂದವರು, 'ಎಲ್ಲ ತತ್ವದ ಎಲ್ಲೆ ಮೀರಿ' ಕವಿ ವಾಣಿಯಂತೆ 'ವಿಶ್ವಮಾನವತೆ'ಯ ಸಿಂಚನವನ್ನು ಗೆಂಡತ್ತೂರಿಗೆ ಅರ್ಪಿಸಿದರು



ಇದಕ್ಕಿಂತ ಇನ್ನೇನು ತಾನೇ ಬೇಕು. ಒಬ್ಬರಿಗಾಗಿ ಒಬ್ಬರು ನೆರವಾಗಿ 'ವಸುದೈವ ಕುಟುಂಬ' ಎಂಬ ಮಹಾ ವಾಕ್ಯಕ್ಕೆ ಹೊಸ ಹಾಡು ಬರೆದು ಹೋಗಿರುವರು.

ಈಗ ನೀವು ಹೋಗಿ ಕೇಳಬೇಕು. ಗೆಂಡತ್ತೂರು ಸಿಂಗಪುರ್ ಒಂದಕ್ಕೊಂದು ಮಾನಸಿಕವಾಗಿ ಬಂಧು -ಬಳಗದ ಮಾತಾಗಿ ಬೆರೆತಿದೆ. ನಾವಂತು ಸಿಂಗಪುರಕ್ಕೆ ಹೋಗಿ ಗೆಂಡತ್ತೂರು ಬಾವಣಿಕೆ ಕುರಿತು ಕೇಳಲು ಆಗದಿರಬಹುದು. ಗೆಂಡತ್ತೂರಿಗೆ ನೀವು ಬಂದು

ಕೇಳಿದರೆ ಒಡಹುಟ್ಟಿನ ಭಾವದಲ್ಲಿ ಅದೇ ಸಂಭ್ರಮದಲ್ಲಿ ಕಣ್ಣಿಗೆ ಹೊಳಪು ತಂದುಕೊಂಡು ಸಿಂಗಪುರದ ತಂಡದ ಬಗ್ಗೆ ಹೇಳುತ್ತಾರೆ. ಇದೆಲ್ಲ 'ಛಾವಣಿ ಮಳೆ ನೀರು' ಪ್ರಯೋಗ ತಂದಿತ್ತ ಸಂಭ್ರಮ. ಐಕ್ಯತೆ ಇದೂ ಯಾರಾದರೂ ಕೇಳಿದವರು ಮರೆಯಲುಂಟೆ. ಅನುಭವಿಸದ ಈ ಊರಿನ ಜನರು ನೆನಪು ಮಾಸುವುದುಂಟೆ. ಈ ಬಾಂಧವ್ಯಕ್ಕೆ ಮಳೆರಾಯ ಮುಂದಿನ ಮಳೆಗೆ 'ಕರುಬಬಾರದು' ಅಷ್ಟೆ. ಒಂದು ದಾರ ಹೆಚ್ಚಿಗೆ ಮಳೆ ಹೂಯ್ದು, ಈ ಸಂಭ್ರಮದ ನೆನಪನ್ನು ಮತ್ತಷ್ಟು ಹೆಚ್ಚಿಸಬೇಕು. ಅಷ್ಟು ಮಾಡಿದರೆ ನಿಜಕ್ಕೂ ಮಳೆರಾಯನಿಗೆ ವಿಶೇಷ ಥ್ಯಾಂಕ್ಸ್.

ಒಟ್ಟಿನಲ್ಲಿ ಗೆಂಡತ್ತೂರು ಮಳೆನೀರು ಸಂಗ್ರಹಕ್ಕೆ ಈ ನೆಲದ ಅಭಿವೃದ್ಧಿ ಚಟುವಟಿಕೆಗೆ ಒಂದು ಮಾದರಿ ಕೇಂದ್ರವಾಗಿರುವುದರಲ್ಲಿ ಅನುಮಾನವೇ ಇಲ್ಲ. ಇದನ್ನು ಸಾಧ್ಯ ಮಾಡಿದ ಕಾರ್ಟ್, ಮೈರಾಡ, ನಮ್ಮ ಮೈಸೂರು ಜಿಲ್ಲಾ ಪಂಚಾಯಿತಿಗೆ ಸಾವಿರದೊಂದು ನಮಸ್ಕಾರಗಳು. ಕಷ್ಟಕೋಟಲೆಗಳ ಮಧ್ಯೆ ನಲುಗಿ, 'ಬದುಕು ಮನ್ನಿಸು ಪ್ರಭುವೆ' ಎಂದು ಮಧ್ಯೆ, ಮಧ್ಯೆ ಎದ್ದು ಹೋಗಿ ಬಿಡುವ ಎಷ್ಟೋ ಜೀವನ ಮಧ್ಯೆ ಇದು ಹೊಸ ಆಶಯಗಳನ್ನು ತೋರಿಸುತ್ತಿದೆ. ಇಡಿಯಾಗಿದ್ದ ಊರುಗಳು ನೀರಿನ ಕಾರಣಕ್ಕೇ ಬಿಡಿ ಬಿಡಿಯಾಗಿ ಹರಿದು ಹಂಚಿಹೋಗಿ ಬಿಡುವ ಈ ಗಳಿಗೆ ಶಾಶ್ವತ ಮಾರ್ಗವೊಂದನ್ನು ನೀಡಿದಂತೆ ಕಾಣುತ್ತಿದೆ. ಅಷ್ಟರ ಮಟ್ಟಿಗೆ ಛಾವಣಿ ಮಳೆನೀರಿನ ವಹಿವಾಟಿನ ಮೂಲಕ ಗೆಂಡತ್ತೂರು ತಾನು ತನ್ನ ಕಾಲ ಮೇಲೆ ನಿಲ್ಲಲ್ಲೊಂದು ಅವಕಾಶವನ್ನು ತಾನೂ ಸೃಷ್ಟಿಸಿಕೊಂಡಿದೆ. ತಾನು ನಂಬಿದ ಅನೇಕ ನಂಬಿಕೆಗಳ ನಡುವೆಯೂ. ಛಾವಣಿ ಮಳೆನೀರನ್ನು ಒಪ್ಪಿಕೊಂಡಿದೆ. ಕಾರ್ಟ್ ಮತ್ತು ಮೈರಾಡ ಅನುಭವದ ಮಾತಿನಲ್ಲಿ ಹೇಳುವುದಾದರೆ "ಈ ಪ್ರಯೋಗದಿಂದ ಇಡೀ ಊರಿನಲ್ಲಿ ನೀರಿನ ಪರದಾಟ ಹೋಗಿ ಗೋಚರಿಸಿದಂತೆ ಸಮಾಧಾನದ ಗೆರೆಗಳು ಮೂಡಿವೆ.

ನೀರಿಗಾಗಿ ದಿನಾಲೂ ಕೂಲಿಯನ್ನು ಬಿಟ್ಟು ಮಧ್ಯೆ, ಮಧ್ಯೆ ಹೆಂಗಸರು ಬಂದುಬಿಡಬೇಕಿತ್ತು. ದಿನಾಲೂ ಹೊಳೆಗೆ ಹೋಗಿ ನೀರು ತಂದು ಅಡುಗೆ ಮಾಡುವ ಹೊಣೆ ಇವರದ್ದಾದರಿಂದ ಕೂಲಿಯಲ್ಲಿ ಕೊರೆಯಾಗುತ್ತಿತ್ತು. ಈಗ ಅದು ನೀಗಿ ದುಡಿದ ಕೈಗೆ ದುಡಿದಷ್ಟು ಕಾಸು ತರುವ ಸಮಾಧಾನ ಸಿಕ್ಕಿದೆ.

ಊರಿಗೇ ಊರೇ ಒಂದಾಗಿ ಸಾಮಾನ್ಯ ವಿಷಯ. ಎಲ್ಲರಿಗೂ ಬೇಕಾದ ವಿಷಯಕ್ಕೆ ಒಂದಾಗುವ ಕಲೆಗೆ ಮಾದರಿಯಾಗಿ ಕಂಡಿದೆ. ಒಂದಷ್ಟು ಬಾಂಧವ್ಯಕ್ಕೆ ಕಳೆ ಕಟ್ಟಿಕೊಟ್ಟಿದೆ.

ಛಾವಣಿ ಮಳೆನೀರು ಬಳಸಿ, ಮೈ ಸೋಪು ಕಮ್ಮಿ ಖರ್ಚಾಗುತ್ತಿದೆ.

ಎಲ್ಲಕ್ಕಿಂತ ಮಿಗಿಲಾಗಿ ಹೆಂಗಸರ ಶ್ರಮಕ್ಕೊಂದಿಷ್ಟು ತಡೆ ನೀಡಿ ವಿರಾಮವೂ ಸಿಕ್ಕುತ್ತಿದೆ. ಇದೆಲ್ಲಾ ಛಾವಣೀ ಮಳೆನೀರಿನ ಪವಾಡ.

**ಮರೆಯುವ ಮುನ್ನ**

ಇಷ್ಟೆಲ್ಲ ಪ್ರಯೋಗಕ್ಕೆ ತೆರೆದುಕೊಂಡ ಊರಿನ ಮನಸ್ಸು ಆಶ್ಚರ್ಯವೆನಿಸುವ ಸ್ವಭಾವವೊಂದನ್ನು ನಿರೂಪಿಸಿದೆ. ಇದು ಅಭಿವೃದ್ಧಿಪರ ಕಾರ್ಯ ನಿರ್ವಹಿಸುವ ವ್ಯಕ್ತಿಗಳು, ಸಂಸ್ಥೆಗಳಿಗೊಂದು ಪಾಠವೂ ಹೌದು! ಎಲ್ಲರ ಬಳಕೆಗೆಂದು ಕಾರ್ಟ್ ತನ್ನ ವಿನೂತನ ಸಂಶೋಧನೆಯಿಂದ ಕಾರ್ಟ್ ಪಂಪ್‌ನ್ನು ತಯಾರಿಸಿ ಊರಿನ ಜಮೀನುದಾರರೊಬ್ಬರ ಜಮೀನಿನಲ್ಲಿ ಅಳವಡಿಸಿತ್ತು. ತೆರೆದ ಬಾವಿಯಲ್ಲಿ ಇದನ್ನು ಅಳವಡಿಸಿ ಜನಕ್ಕೆ ನೀರು ಒದಗಿಸುತ್ತಿತ್ತು. ಆಕಸ್ಮಿಕವಾಗಿ ಆ ಜಮೀನಿನ ಮಾಲೀಕ ಸಾವನ್ನಪ್ಪಿದ್ದ. ಕನಿಷ್ಟ 11 ದಿನ ಸೂತಕ ಕಳೆಯುವವರೆಗೂ ಊರಿನ ಒಂದು ನರಪಿಳ್ಳೆಯೂ ಆ ಜಮೀನಿಗೆ ಹೋಗಲಿಲ್ಲ.

ಈ ಕಾರ್ಟ್ ಪಂಪ್‌ನಿಂದ ನೀರು ಮುಟ್ಟಲಿಲ್ಲವಂತೆ. ಅಷ್ಟು ದಿನ ಯಾವ ಹೊಳೆ ನೀರು ಕುಡಿಯದೇ ಆರೋಗ್ಯಕ್ಕೆ ಮುಖ ಮಾಡಿ ನಡೆದಿತ್ತೋ ಆ ಊರೇ ಈ 11 ದಿನ ಪೂರ್ತಿ ಹೊಳೆ ನೀರನ್ನು ಕುಡಿದು ಪುನಃ ಕೆಮ್ಮು, ಜ್ವರ ಬರಿಸಿಕೊಂಡು, ಸೂತಕ ಕಳೆಯುವ ದಿನಕ್ಕಾಗಿ ಕಾದು ಕುಳಿತ್ತಿತ್ತಂತೆ ಮರೆಯುವ ಮುನ್ನ ಇಂಥ ವಿಲಕ್ಷಣ ಸಂಗತಿಗಳು ನಮ್ಮ ನೆನಪಿನಲ್ಲಿರಲಿ ಎಂದು ದಾಖಲಿಸಿದೆ.



**ಉಪಸಂಹಾರ**

ಒಟ್ಟಿನಲ್ಲಿ ಗೆಂಡತ್ತೂರು ಇಂದು ಕನಿಷ್ಟ ನಾಕಾರು ತಿಂಗಳಿಗಾದರೂ ನೀರಿನಲ್ಲಿ ಸ್ವಾವಲಂಬಿ. ಅಷ್ಟರಮಟ್ಟಿಗೆ ಇಲ್ಲಿ ಛಾವಣಿ ಮಳೆನೀರಿನ ಸಂಗ್ರಹಗಾರಗಳು ಎಲ್ಲರಿಗೂ ಮಾದರಿಯಾಗಿದೆ. ಗಾಂಧೀ ಬಯಸಿದ ನಾಡಿನಲ್ಲಿ ಅವರು ಕಂಡ ಕನಸಿನ ಸ್ವಾವಲಂಬಿ ಗ್ರಾಮವೊಂದರ ಉದಯಕ್ಕೆ ಇಲ್ಲಿ ಮುನ್ನುಡಿ ಇದೆ. ಇದು ನೀರಿನ ವಿಷಯದಲ್ಲಿ ಕರ್ನಾಟಕದ ಹೆಮ್ಮೆಯ ಸ್ವಾವಲಂಬಿ ತಾಣವಾಗಿದೆ. ನೀವೂ ಬನ್ನಿ. ನಿಮ್ಮ ನೆಚ್ಚಿನ ಒಡನಾಡಿಗಳೊಂದಿಗೆ ಈ ಊರಿಗೆ ಬನ್ನಿರಿ. ಗೆಂಡತ್ತೂರು ಸ್ವಾವಲಂಬಿಯಾಗಿರುವುದನ್ನು ಕಾಣಲು ಹಾಗೂ ಒಂದು ಲೋಟ ಮಳೆನೀರನ್ನು ಕುಡಿಯಲಾದರೂ ಬನ್ನಿರಿ.

# ಓದುವ ಮುನ್ನ...

ಆಟ ಆಡುವುದು ಚಂದ. ಸುದೀರ್ಘ ಓದಿನ ಮಧ್ಯೆ ಇಂಥ ಚಟುವಟಿಕೆಗಳು ಅಕ್ಷರದೊಡನೆ ಓದುಗರಿಗೆ ಆನಂದ ನೀಡಲೆಂದೇ ವಿನ್ಯಾಸಗೊಂಡಿರುತ್ತವೆ. ಪರಿಸರ, ಸಮಾಜ ವಿಜ್ಞಾನ ಇತ್ಯಾದಿ ವಿಚಾರ ಕುರಿತು ಇಂಥ ಆಟಗಳು ಅನೇಕ ನಿಯತ ಕಾಲಿಕೆಗಳ ಮೂಲಕ ಬರುತ್ತಲೇ ಇರುತ್ತವೆ. ಅದರಂತೆ ಜಲದಾಟವೂ ಕೂಡ. ಜಲಬಂಧ ಅಂಥ ಪ್ರಯತ್ನಗಳಲ್ಲೊಂದು ಗೆಳೆಯರಾದ ಬಿ.ಎ. ಷಂಶುದ್ದೀನ್, ಸಾಕ್ಷರತಾ ಕಾರ್ಯಕ್ರಮಗಳಲ್ಲಿ ವಿಷಯ ಪರಿಣಿತರಾಗಿ ಕೆಲಸ ನಿರ್ವಹಿಸುತ್ತಾ ಬಂದವರು. ರಾ.ಸಂ. ಕೇಂದ್ರದ ಮುಖೇನ ನಡೆಯುವ ಜಲಸಂಬಂಧಿ ಚಟುವಟಿಕೆಗಳಲ್ಲಿ ಸಹಭಾಗಿಯಾಗುತ್ತ ಬಂದವರು. ಇವರು 'ಜಲಸಾಕ್ಷರತೆ' ಪತ್ರಿಕೆಗಾಗಿ ವಿಶೇಷವಾಗಿ 'ಜಲಬಂಧ' ರಚಿಸಿಕೊಡುತ್ತಾ ಜಲದಾಟಕ್ಕೆ ಆಸಕ್ತರನ್ನು ಸೆಳೆದರು.

ಪ್ರಸ್ತುತ ಈ ಲೇಖನದಲ್ಲಿ ಷಂಶುದ್ದೀನ್ ರಚಿಸಿರುವ 'ಜಲಬಂಧ'ಗಳನ್ನು ನೀಡಿದ್ದೇವೆ. ಪ್ರಸ್ತುತ ಓದುತ್ತಾ ಓದುಗರು 'ಜಲಬಂಧ'ವನ್ನು ಆಡಿ ಸಂತೋಷಿಸಲು ನೀಡಿದ್ದೇವೆ. ಇದಕ್ಕೆ ವಿಶೇಷ ಪರಿಶ್ರಮವಹಿಸಿ ರಚಿಸಿಕೊಟ್ಟ ಲೇಖಕರನ್ನು ಅಭಿನಂದಿಸುವೆ. ಇದನ್ನು ಆಡುತ್ತಲೇ ಓದುಗರು ಮತ್ತೊಂದಷ್ಟು 'ಜಲಬಂಧ' ನಿರ್ಮಿಸಲೆಂದು ಬಯಸುವೆ.

**ಸಂಪಾದಕ**

# ಜಲಬಂಧ ಸಾಹಿತ್ಯ ರಚನೆ

**ರಚನೆ :** ಷಂಶುದ್ದಿನ್
ಸಂಪನ್ಮೂಲ ವ್ಯಕ್ತಿಗಳು, ರಾಣಿಪೇಟೆ ರಸ್ತೆ,
ಮಡಿಕೇರಿ, ಕೊಡಗು ಜಿಲ್ಲೆ.

ನೀರನ್ನು ಭೌತಿಕವಾಗಿ ಬಂಧಿಸುವುದರ ಮೂಲಕ ಅಗತ್ಯತೆಗಳನ್ನು ಪೂರೈಸಿಕೊಳ್ಳುವುದು ಒಂದು ವಿಧಾನ. ಕೆರೆಕಟ್ಟೆಗಳಲ್ಲಿ, ಭೂಮಿಯ ಅಂತರಾಳದಲ್ಲಿ ಮಳೆನೀರು ಶೇಖರವಾಗುವಂತೆ ನೋಡಿಕೊಂಡು ಭವಿಷ್ಯದ ಬಳಕೆಗೆ, ಮನುಷ್ಯನಿಗೆ ಮಾತ್ರವಲ್ಲದೆ ಸಕಲ ಜಲಾಚರಗಳ ಬಳಕೆಗೆ ಸಂರಕ್ಷಣೆ ಮಾಡುವುದು ಮತ್ತೊಂದು ಬಗೆಯದು. ಇದರಲ್ಲಿ ಮನುಷ್ಯನೊಬ್ಬನದೇ ಪಾಲೇನು ಇಲ್ಲ. ನೀರು ಬಳಕೆಯ ಜೊತೆಗೆ ಸಂರಕ್ಷಣೆಯನ್ನು ಭೂಗೋಳದಲ್ಲಿರುವ ಸಕಲ ಜೀವಿಗಳು ಒಂದಲ್ಲ ಒಂದು ರೀತಿಯಲ್ಲಿ ಭಾಗಿಯಾಗುತ್ತವೆ. ನಿಸರ್ಗದ ನಿಯಮವೇ ಹಾಗೆ. ನಿಸರ್ಗ ಯಾರಲ್ಲಿಯೂ ಬೇಧಭಾವ ಕಾಣುವುದಿಲ್ಲ. ಬಡವ ಬಲ್ಲಿದ, ಶ್ರೀಮಂತ, ಆ ಜಾತಿ ಈ ಜಾತಿ, ಮೇಲು ಕೀಳು ಇತ್ಯಾದಿಗಳು ಯಾವುವು ಅದರಲ್ಲಿಲ್ಲ. ಅವೆಲ್ಲವನ್ನೂ ಮನುಷ್ಯನಿಗೆ ಬಿಟ್ಟುಬಿಟ್ಟಿರುವ ರೀತಿಯಲ್ಲಿ ಎಲ್ಲರಲ್ಲೂ, ಎಲ್ಲದರಲ್ಲೂ ಸಮಾನತೆಯನ್ನು ರೂಢಿಸಿಕೊಂಡು ಎಲ್ಲರನ್ನು, ಎಲ್ಲವನ್ನು ಸಮನಾಗಿ ಪೊರೆಯುತ್ತಿದೆ. ಅದಕ್ಕೆ ನಾವು ಎಲ್ಲರನ್ನು, ಎಲ್ಲವನ್ನು ಸಮನಾಗಿ ಪೊರೆಯುತ್ತಿದೆ. ಅದಕ್ಕೆ ನಾವು ಎಲ್ಲವನ್ನೂ ಪೊರೆಯುತ್ತಿರುವ ಈ ಭೂಮಂಡಲಕ್ಕೆ ಮಾತೃಸ್ಥಾನವನ್ನು ನೀಡಿ 'ತಾಯಿ' ಎಂದು ಸಂಭೋಧಿಸುವುದು ಅರ್ಥಪೂರ್ಣವಾಗಿದೆ. ಅಷ್ಟರಮಟ್ಟಿಗಾದರು ಮನುಷ್ಯ ದೊಡ್ಡತನವನ್ನು ಮೆರೆದಿದ್ದಾನೆ ಇಷ್ಟು ಸಾಕೆ.

ಇಲ್ಲ ಈ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆತ ತನ್ನ ಭಾವನೆಗಳ ಮೂಲಕ ನೀರಿನ ಸಂಪನ್ಮೂಲವನ್ನು ಅಕ್ಷರ ರೂಪದಲ್ಲಿ ಬಂಧಿಸುವ, ಇತರರನ್ನು ತನ್ಮೂಲಕ ಪ್ರೇರೇಪಿಸುವ, ಜಲಸಾಕ್ಷರತೆಯಂತಹ ಕಾರ್ಯಕದಲ್ಲಿ ತೊಡಗಿಕೊಳ್ಳುವಂತೆ ಒಂದಷ್ಟು ಪ್ರೇರಣಾತ್ಮಕ ಕಾರ್ಯಗಳನ್ನು ಮಾಡುತ್ತಿದ್ದಾನೆ. ಕವಿಗಳು ಕಥೆ, ಕವನ, ಹಾಡು, ಲಾವಣಿ, ಚುಟುಕ, ವಚನ, ಇತ್ಯಾದಿಗಳ ಮೂಲಕವೂ ಜಲಮೂಲದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಪ್ರಸ್ತುತ ಇಲ್ಲಿ ಪದಬಂಧಗಳ ಮೂಲಕ ಓದುಗರಲ್ಲಿ ಮತ್ತೂ ಜಲಾಶಕ್ತರಲ್ಲಿ ನೀರಿನ ಬಗ್ಗೆ ವಾತ್ಸಲ್ಯ ಮೂಡಿಸುವ ಪ್ರಯತ್ನವಾಗಿ ಆಯಾ 'ಜಲಬಂಧ' ವಿಧಾನದಲ್ಲಿ ಜಲದ ವಿವಿಧ ಆಯಾಮಗಳ ಕುರಿತು ಚಿಂತಿಸುವ ಬೌದ್ಧಿಕ ಕಸರತ್ತು ತರುವ ಸ್ವರೂಪವನ್ನು ನೀಡಲಾಗಿದೆ. ಇವುಗಳನ್ನು ಆಸಕ್ತರು ತುಂಬಬಹುದು ಹಾಗೂ ತಾವು ತುಂಬಿರುವ ಜಲಬಂಧದ ಅಕ್ಷರಗಳು ಸರಿಯಾಗಿದೆಯೆ ಎಂಬುದನ್ನು ತಿಳಿಯಲು ಪುಸ್ತಕದ ಕೊನೆಯಲ್ಲಿ ನೀಡಿರುವ ಉತ್ತರಗಳನ್ನು ನೋಡಬಹುದು.